ಸಂಪುಟ 01 | ಸಂಚಿಕೆ 161 | ಸೋಮವಾರ ಮೇ 4 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಅಗ್ನಿಶಾಮಕ ದಿನ (International Firefighters' Day

ಅನ್ನು ಮೇ 4, 2026 (ಸೋಮವಾರ) ರಂದು ಆಚರಿಸಲಾಗುತ್ತದೆ. ಈ ದಿನದ ಉದ್ದೇಶ ಈ ದಿನವು ಅಗ್ನಿಶಾಮಕ ದಳದ ಸಿಬ್ಬಂದಿಗಳ ಧೈರ್ಯ, ತ್ಯಾಗ ಮತ್ತು ಸೇವೆಯನ್ನು ಗೌರವಿಸಲು ಆಚರಿಸಲಾಗುತ್ತದೆ. ಜನರ ಜೀವ, ಆಸ್ತಿ ಮತ್ತು ಪರಿಸರವನ್ನು ರಕ್ಷಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಡುವವರನ್ನು ಸ್ಮರಿಸುವ ದಿನವಾಗಿದೆ.

## ಸುಭಾಷಿತ

ಶಿಕ್ಷಣದ ಬೇರುಗಳು ಕಹಿ ಇರಬಹುದು,
ಆದರೆ ಅದರ ಫಲ ಸಿಹಿಯಾಗೇ ಇರುತ್ತದೆ

– ಅರಿಸ್ಟಾಟಲ್

## ವಾಲ್ಮೀಕಿ ಜಾಗೃತ ಸಮಾವೇಶಕ್ಕೆರವಿ ಡಿ ಚನ್ನಣ್ಣನವರಿಗೆ ಆಹ್ವಾನ

ನೈಜ್ಯ ದೆಸೆ ನ್ಯೂಸ್

ಸಿರವಾರ.:–ವಾಲ್ಮೀಕಿ ನಾಯಕ ಒಕ್ಕೂಟದ ಮುಖಂಡರು ಜಿಲ್ಲಾಮಟ್ಟದ ಖಂಡರುಜಿಲಾಮ ವಾಲ್ಮೀಕಿ ಜಾಗೃತಿ ಸಮಾವೇಶಕ್ಕೆ "ರವಿ ಡಿ ಚನ್ನಣ್ಣನವರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯದರ್ಶಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಅಧಿಕಾರಿ ಯವರನ್ನು ಈ ಕಾರ್ಯಕ್ರಮಕ್ಕೆ ಆಹ್ವಾನಿಸಲಾಯಿತು ಸಿರವಾರ ತಾಲೂಕಿನಲ್ಲಿ ನಡೆಯುವ ಇದೇ ತಿಂಗಳು 17ರಂದು ಜರುಗುವ ಕಾರ್ಯಕ್ರಮಕ್ಕೆ ಆಹ್ವಾನಿಸಿಸನ್ಮಾನಿಸದರು. ರವಿ ಡಿ ಚನ್ನಣ್ಣನವರ್ ಮಾತನಾಡಿ, "ಆರ್ ಡಿ ಸಿ ಪೌಂಡೇಶನ್" ವತಿಯಿಂದ ಬಡ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಪಡೆದು ಯಶಸ್ವಿಗೊಳ್ಳಿ ಎಂದು ಸಮಾಜದ ವಿದ್ಯಾರ್ಥಿಗಳಿಗೆ ತಿಳಿಸಿದರು ಜೊತೆಗೆ ವಾಲ್ಮೀಕಿ ಸಮಾಜದ ಜನಾಂಗವು ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದಿದ್ದು ವಾಲ್ಮೀಕಿ ಸಮಾಜಕ್ಕೆ ಜಾಗೃತಿ ಸಮಾವೇಶದ ಅವಶ್ಯಕತೆ ಇದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಜಿಲ್ಲಾ ಮಟ್ಟದ ವಾಲ್ಮೀಕಿ ಜಾಗೃತಿ ಸಮಾವೇಶ ಮಾಡುವುದರಿಂದ ಮುಂದಿನ ದಿನಗಳಲ್ಲಿ ಸಮಾಜದ ಯುವ ನಾಯಕರು ಮುಂದೆ ಬರುವುದು ಎಂದು ಹೇಳಿದರು ಈ ಸಂಧರ್ಭದಲ್ಲಿ ಸಮಾಜದ ಮುಖಂಡರಾದಲಿಂಗಯ್ಯನಾಯಕ್ ಸೈದಾಪುರ್, ವೆಂಕಟೇಶ ದೊರೆ ವೆಂಕಟೇಶ ಶಂಕ್ರಿ ದೇವತಗಲ್. ಮಲ್ಲಿಕಾರ್ಜುನ ನಾಯಕ ಸಿಕಂಟಿ, ಮಹಾಂತೇಶ ನಾಯಕ ತಡಕಲ್ ಸೇರಿದಂತೆ ಇನ್ನಿತರರು ಇದ್ದರು.



# ಸಿಂಧನೂರಿನಲ್ಲಿ ಭವ್ಯ ಉಚಿತ ಸಾಮೂಹಿಕ ವಿವಾಹ ಮಹೋತ್ಸವ

## ಬಸನಗೌಡ ಫೌಂಡೇಶನ್ ಸಮಾಜ ಸೇವೆ ಶ್ಲಾಘನೀಯ – ಡಿಸಿಎಂ ಡಿ.ಕೆ. ಶಿವಕುಮಾರ್

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ನೇತೃತ್ವದ ಬಸನಗೌಡ ಫೌಂಡೇಶನ್ ವತಿಯಿಂದ ರಾಯಚೂರು ಜಿಲ್ಲೆಯ ಸಿಂಧನೂರಿನಲ್ಲಿ ಭಾನುವಾರ ಭವ್ಯವಾಗಿ ಆಯೋಜಿಸಲಾದ ಉಚಿತ ಸಾಮೂಹಿಕ ವಿವಾಹ ಮಹೋತ್ಸವ , ಮುತ್ತೈದೆಯರಿಗೆ ಹುಡಿ ತುಂಬುವ ಕಾರ್ಯಕ್ರಮ ಹಾಗೂ ಕ್ಷೇತ್ರದಲ್ಲಿ ಜಾರಿಗೊಂಡಿರುವ ವಿವಿಧ ಅಭಿವೃದ್ಧಿ ಹಾಗೂ ಜನಪರ ಕಾರ್ಯಕ್ರಮಗಳನ್ನು ಒಳಗೊಂಡ ಕೈಪಿಡಿಯ ಅನಾವರಣ ಕಾರ್ಯಕ್ರಮವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸಾಮೂಹಿಕ ವಿವಾಹಗಳು ದೊಡ್ಡ ಸಹಾಯವಾಗುತ್ತವೆ. ಸಮಾಜ ಸೇವೆ ಎಂದರೆ ಕೇವಲ ರಾಜಕೀಯವಲ್ಲ, ಜನರ ಬದುಕಿಗೆ ಸ್ಪರ್ಶಿಸುವ ಕಾರ್ಯಗಳಾಗಿರಬೇಕು. ಬಸನಗೌಡ ಫೌಂಡೇಶನ್ ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಜನರಿಗೆ ಆಶ್ರಯವಾಗಿರುವುದು ಶ್ಲಾಘನೀಯ ಎಂದು ಹೇಳಿದರು. ಸಾಮಾಜಿಕ ಬದ್ಧತೆಯೊಂದಿಗೆ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಜನಪರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕೆಲಸ ನಡೆಯುತ್ತಿರುವುದು ಸಂತಸದ ಸಂಗತಿ ಎಂದು ಅವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಸಾವಿರಾರು ಸಾರ್ವಜನಿಕರು ಭಾಗವಹಿಸಿ ನೂತನ ವಧೂವರರಿಗೆ ಆಶೀರ್ವಾದ ಸಲ್ಲಿಸಿದರು. ಒಂದೇ ವೇದಿಕೆಯಲ್ಲಿ ವಿವಿಧ ಸಮುದಾಯಗಳ ಜೋಡಿಗಳು ವಿವಾಹ ಬಂಧನಕ್ಕೆ ಒಳಗಾದ ದೃಶ್ಯ ಸಮಾಜದಲ್ಲಿ ಐಕ್ಯತೆ ಮತ್ತು ಸಹೋದರತ್ವದ ಸಂಕೇತವಾಗಿ ಗಮನ ಸೆಳೆಯಿತು.ಸಾಮೂಹಿಕ ವಿವಾಹದ ಅಂಗವಾಗಿ ವಧೂವರರಿಗೆ ಅಗತ್ಯ ಗೃಹೋಪಯೋಗಿ ಸಾಮಗ್ರಿಗಳು, ವಿವಾಹ ಉಡುಗೊರೆಗಳು ಹಾಗೂ ಜೀವನ ಆರಂಭಕ್ಕೆ ಅಗತ್ಯ ಸಹಾಯ ವಿತರಿಸಲಾಯಿತು. ಇದರ ಮೂಲಕ ಹೊಸ ಜೀವನ ಆರಂಭಿಸುವ ದಂಪತಿಗಳಿಗೆ ಆತ್ಮವಿಶ್ವಾಸ ಹಾಗೂ ಭದ್ರತೆ ಒದಗಿಸುವ ಕಾರ್ಯ ನೆರವೇರಿತು.ಸಾಮಾಜಿಕ ಸೇವೆಯೊಂದಿಗೆ ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಆಯೋಜಿಸಲಾದ ಈ ಮಹೋತ್ಸವವು ಜನಮನದಲ್ಲಿ ವಿಶೇಷ ಸ್ಥಾನ ಪಡೆದಿದ್ದು, ಸರಳ ವಿವಾಹ ಪದ್ಧತಿಯನ್ನು ಉತ್ತೇಜಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟರು. ಸಮಾಜದಲ್ಲಿ ಹೆಚ್ಚುತ್ತಿರುವ ಅತಿರೇಕ ಖರ್ಚು, ಸಾಲಬಾಧೆ ಹಾಗೂ ಅಡಂಬರ ಸಂಸ್ಕೃತಿಗೆ ಪರ್ಯಾಯವಾಗಿ ಸಾಮೂಹಿಕ ವಿವಾಹಗಳು ಉತ್ತಮ ದಾರಿಯನ್ನು ತೋರಿಸುತ್ತಿವೆ. ಇಂತಹ ಕಾರ್ಯಕ್ರಮಗಳು ಯುವಜನತೆಗೆ ಸಕಾರಾತ್ಮಕ ಸಂದೇಶ ನೀಡುತ್ತಿದ್ದು, ಸಮಾಜದಲ್ಲಿ ಜವಾಬ್ದಾರಿಯುತ ಬದುಕಿನ ಮೌಲ್ಯಗಳನ್ನು ಬಲಪಡಿಸುತ್ತಿವೆ ಎಂದು ಗಣ್ಯರು ಹೇಳಿದರು.ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಆಯೋಜಕರು, ಸ್ವಯಂಸೇವಕರು ಹಾಗೂ ಸಹಕರಿಸಿದ ಸಾರ್ವಜನಿಕರ ಸೇವಾಭಾವವನ್ನು ಗಣ್ಯರು ಪ್ರಶಂಸಿಸಿದರು. ಸಮಾಜ ಸೇವೆಯ ಮೂಲಕ ಜನರ ಬದುಕಿಗೆ ಬೆಳಕು ನೀಡುವ ಈ




ರೀತಿಯ ಕಾರ್ಯಗಳು ಮುಂದುವರಿಯಲಿ ಎಂದು ಎಲ್ಲರೂ ಆಶಿಸಿದರು.ನಂತರ ಈ ಕಾರ್ಯಕ್ರಮದಲ್ಲಿ ಆಶೀರ್ವಚನ ಹಾಗೂ ಗಣ್ಯರ ಉಪಸ್ಥಿತಿ ಕಾರ್ಯಕ್ರಮದಲ್ಲಿ ಒಳಬಳ್ಳಾರಿಯ ಶ್ರೀ ಸುವರ್ಣಗಿರಿ ವಿರಕ್ತ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು.ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಸನ್ಮಾನ್ಯ ಶ್ರೀ ಎಂ.ಎಸ್. ಬೋಸರಾಜು ಜಿ, ಕೆ.ಎಚ್. ಮುನಿಯಪ್ಪ, ಈಶ್ವರ್ ಖಂಡ್ರೆ, ಆರ್.ಬಿ. ತಿಮ್ಮಾಪುರ, ಶಿವರಾಜ್ ತಂಗಡಗಿ, ಮಧು ಬಂಗಾರಪ್ಪ ಹಾಗೂ ಖ್ಯಾತ ಚಿತ್ರನಟ ಸುದೀಪ್ ಸೇರಿದಂತೆ ಅನೇಕ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಗಣ್ಯರು ಭಾಗವಹಿಸಿದರು.ಸಾಮೂಹಿಕ ವಿವಾಹದ ವಿಶೇಷತೆಗಳು ಅನೇಕ ಜೋಡಿಗಳು ಒಂದೇ ವೇದಿಕೆಯಲ್ಲಿ ವಿವಾಹ ಬಂಧನಕ್ಕೆ ವಧೂವರರಿಗೆ ಅಗತ್ಯ ಗೃಹೋಪಯೋಗಿ ಸಾಮಗ್ರಿಗಳ ವಿತರಣೆ ಸಾವಿರಾರು ಸಾರ್ವಜನಿಕರ ಸಮ್ಮುಖದಲ್ಲಿ ಆಶೀರ್ವಾದ ಸಮಾಜದಲ್ಲಿ ಸಮಾನತೆ ಮತ್ತು ಸರಳ ವಿವಾಹಕ್ಕೆ ಉತ್ತೇಜನ ಜನಪರ ಅಭಿವೃದ್ಧಿ ಕೈಪಿಡಿ ಅನಾವರಣ ಈ ಸಂದರ್ಭದಲ್ಲಿ ಕ್ಷೇತ್ರದಲ್ಲಿ ಕೈಗೊಂಡಿರುವ ರಸ್ತೆ, ಶಿಕ್ಷಣ, ಕುಡಿಯುವ ನೀರು, ಸಾಮಾಜಿಕ ಕಲ್ಯಾಣ ಹಾಗೂ ಅಭಿವೃದ್ಧಿ ಯೋಜನೆಗಳನ್ನು ಒಳಗೊಂಡ ವಿಶೇಷ ಕೈಪಿಡಿಯನ್ನು ಅನಾವರಣಗೊಳಿಸಲಾಯಿತು. ಜನರಿಗೆ ಸರ್ಕಾರದ ಯೋಜನೆಗಳ ಮಾಹಿತಿ ತಲುಪಿಸುವ ಉದ್ದೇಶದಿಂದ ಈ ಪ್ರಕಟಣೆ ಹೊರತರುವುದಾಗಿ ತಿಳಿಸಲಾಯಿತು.ಸಾಮಾಜಿಕ ಸೇವೆಗೆ ಸಾರ್ವಜನಿಕರ ಮೆಚ್ಚುಗೆ ಸಾಮೂಹಿಕ ವಿವಾಹ ಮಹೋತ್ಸವವು ಸಮಾಜದಲ್ಲಿ ಸಹಕಾರ, ಸಹಾನುಭೂತಿ ಮತ್ತು ಸರಳ ಜೀವನ ಮೌಲ್ಯಗಳನ್ನು ಬಲಪಡಿಸುವ ಕಾರ್ಯಕ್ರಮವಾಗಿದ್ದು, ಬಸನಗೌಡ ಫೌಂಡೇಶನ್ ಸೇವಾ ಚಟುವಟಿಕೆಗಳಿಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು. ನಂತರ ಈ ಕಾರ್ಯಕ್ರಮದಲ್ಲಿ ಎಲ್ಲಾ ಇಲಾಖೆ ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ ಹಾಗೂ ವಿವಿಧ ಕಾಲೇಜ್ ಗಳ ವಿದ್ಯಾರ್ಥಿಗಳು ಸಂಯೋಜಕರಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು..












# ಬೇಸಿಗೆಯ ಪ್ರಖರ ಬಿಸಿಲಿನ ಹಿನ್ನಲೆ : ಹತ್ತಿ ಬಟ್ಟೆ ಬಳಕೆ, ನಿಯಮಿತವಾಗಿ ನೀರು ಕುಡಿಯುವುದು, ದ್ರವ ಆಹಾರ ಸೇವನೆಗೆ ಆಧ್ಯತೆ ನೀಡಿ.

ನೈಜ್ಯ ದೆಸೆ ನ್ಯೂಸ್

ರಾಯಚೂರು,ಮೇ.03:ಪ್ರತಿದಿನ ಮಧ್ಯಾನ್ಹದ ಬಿಸಿಲು 40 ಡಿಗ್ರಿ ಮೇಲ್ಪಟ್ಟು ಹಾಗೂ ಪ್ರಖರವಾಗಿರುವ ಹಿನ್ನೆಲೆಯಲ್ಲಿ ಮನೆಯಿಂದ ಹೊರಗೆ ಹೋಗುವಾಗ ಆದಷ್ಟು ಹತ್ತಿ ಬಟ್ಟೆ ಉಡುಗೆ, ಜೊತೆಯಲ್ಲಿ ಕುಡಿಯುವ ನೀರು, ಛತ್ರಿ ಬಳಸಲು ಆಧ್ಯತೆ ನೀಡಿ ಆದಷ್ಟು ದ್ರವ ಆಹಾರ ಸೇವನೆ, ಮತ್ತು ಮನೆಯಲ್ಲಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ದೀರ್ಘಕಾಲಿನ ಚಿಕಿತ್ಸೆಗೆ ಒಳಪಟ್ಟವರು, ವಯೊವೃದ್ಧರ ಕಾಳಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆಧ್ಯತೆ ನೀಡಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಹಾಗೂ ಆರೋಗ್ಯ ಇಲಾಖೆಯ ಮೂಲಕ ಮನವಿ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ತಿಳಿಸಿದರು.ದೇವದುರ್ಗ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಬೇಸಿಗೆ ಶಾಖಾಘಾತ ನಿರ್ವಹಣೆಯ ವಾರ್ಡ್, ಹಾಗೂ ಇತರೆ ವಾರ್ಡ್‌ಗೆ ಬೇಟಿ ನೀಡಿ ಸಾರ್ವಜನಿಕರೊಂದಿಗೆ ಮಾತನಾಡಿ, ಬಿಸಿಲಿನ ಪ್ರಖರತೆ ಹೆಚ್ಚಿರುವ ಮಧ್ಯಾನ್ಹದ 12 ಗಂಟೆಯಿಂದ 4 ಗಂಟೆಯವರೆಗೆ ಮನೆಯಿಂದ ಹೊರಗೆ ಹೊಗುವ ಅವಶ್ಯಕತೆವಿದ್ದರೆ ಕುಡಿಯುವ ನೀರು, ಛತ್ರಿ, ಹಾಗೂ ಹತ್ತಿ ಬಟ್ಟೆ ಧರಿಸಲು ಆಧ್ಯತೆ ನೀಡಲು ವಿನಂತಿಸಿದರಲ್ಲದೆ, ಅದರಲ್ಲೊ ನರೇಗಾ ಕೆಲಸ ಮಾಡುವ ಜನರು ತಮಗೆ ಈ ಪೂರ್ವದ ಆರೋಗ್ಯ ಸಮಸ್ಯೆಗಳು ಇದ್ದರೆ ವೈದ್ಯರಿಗೆ ಮಾಹಿತಿ ನೀಡಲು ತಿಳಿಸಿದರಲ್ಲದೆ, ಪ್ರತಿಯೊಬ್ಬರೂ ಮನೆಯಲ್ಲಿ ಓಆರ್‌ಎಸ್ ಜೀವಜಲ ಬಳಕೆಗೆ ಆಧ್ಯತೆ ನೀಡುವ ಮೂಲಕ ನಿರ್ಜಲಿಕರಿಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವ ಜಲ ಪ್ಯಾಕೆಟ್ ಸದಾ ಮನೆಯಲ್ಲಿರಲಿ, ಅಲ್ಲದೆ ಒಂದು ಲೀಟರ್ ನೀರಿಗೆ ಪ್ಯಾಕೇಟ್‌ನಲ್ಲಿಯ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ, ಗಂಜಿ, ಆಹಾರದಲ್ಲಿ ಬೇಳೆ ತಿಳಿ ಬಳಸಲು ಕೋರಿದರು.ನವಜಾತ ಶಿಶುವಿನ ಕಾಳಜಿ:ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿಸುವ



ಮೂಲಕ ಶಿಶುವಿನಲ್ಲಾಗುವ ನಿರ್ಜಲೀಕರಣ ತಡೆಯಲು ಸಹಕಾರಿಯಾಗುವುದು. ಯಾವುದೇ ಕಾರಣಕ್ಕೂ 6 ತಿಂಗಳೊಳಗಿನ ಮಗುವಿಗೆ ತಾಯಿ ಹಾಲು ಮಾತ್ರ ಕುಡಿಸಿ. ಅಲ್ಲದೆ ರೋಗ ನಿರೋಧಕ ಶಕ್ತಿ ವೃದ್ಧಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು.ಗರ್ಭಿಣಿ ಬಾಣಂತಿಯರ ಆರೈಕೆ:ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಿ. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ. ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಇರಲಿ.ವಯೊವೃದ್ದರು ಹಾಗೂ ದಿರ್ಘಾವಧಿ ಕಾಯಿಲೆಯಿಂದ ಬಳಲುವವರ ಆರೈಕೆ:ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೊಗದಿರಲು ಯೋಚಿಸಿ, ದೈನಂದಿನವಾಗಿ ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು.ಚಿಕ್ಕ ಮಕ್ಕಳ ಆರೈಕೆಗೆ ಕಾಳಜಿ ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ. ಅಲ್ಲದೆ ಮುಂಜಾಗೃತವಾಗಿ ಜಿಲ್ಲಾ ಎನ್‌ಪೋರ್ಸಮೆಂಟ್ ಅಧಿಕಾರಿ ಡಾ ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿ ಎಲ್ಲ ಆಸ್ಪತ್ರೆಯ ಬರುವ ಜನತೆಗೆ, ಗ್ರಾಮಗಳಲ್ಲಿ ಹತ್ತಿ ಉಡುಪು ಬಳಕೆ, ಛತ್ರಿ, ಜೊತೆಯಲ್ಲಿ ನೀರು ಇರುವಂತೆ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ. ವಾಂತಿ ಬೇಧಿ ತಡೆ:ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ-ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ಧೀಕರಿಸಿದ ನೀರು ಅಥವಾ ನೀರು ಶುದ್ಧೀಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು. ಅಲ್ಲದೆ ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಸುರಕ್ಷಿತ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಿರಿ, ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಸೇವಿಸಬಾರದು, ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ಇದಕ್ಕಾಗಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಕೆ ನೇತೃತ್ವದಲ್ಲಿ ಅಗತ್ಯ ಜಾಗೃತಿ ನೀಡಲಾಗುತ್ತಿದೆ ಎಂದರು.ಅಲ್ಲದೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಓಆರ್‌ಎಸ್ ಜೀವ ಜಲ ಪ್ಯಾಕೇಟ್ ಸೇರಿದಂತೆ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿವೆ. ಯಾವುದೇ ತುರ್ತು ಸಂದರ್ಭದಲ್ಲಿ 108 ಕ್ಕೆ ಕರೆ ಮಾಡಿ ಆಯಂಬ್ಯುಲೆನ್ಸ್ ಸದುಪಯೋಗ ಪಡೆಯಲು ತಿಳಿಸಿದರು.ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ ಕೆ, ತಾಲೂಕಾ ಆರೋಗ್ಯಾಧಿಕಾರಿ ಡಾ ಬನದೇಶ್ವರ, ಸಾರ್ವಜನಿಕ ಆಸ್ಪತ್ರೆಯ ವೈದ್ಯರಾದ ಡಾ ಗಂಗಾಧರ್, ಡಾ ಶಿವಕುಮಾರ್, ಡಾ ನಾಗರಾಜ ಮಲ್ಕಾಪೂರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಪ್ಪ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸೋಮಪ್ಪ, ಸೇರಿದಂತೆ ಸಿಬ್ಬಂದಿಯವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



## ಸಾಹಿತ್ಯ ಸಿಂಚನ

ಭಾವಾಂತರಂಗ.!

ಭಾವಿಸಿದ್ದೆಲ್ಲವು ಆಗುವುದಿಲ್ಲ ಅಕ್ಷರಶಃ ಕವಿತೆ
ಅಭಿವ್ಯಕ್ತವಾಗದು ಸಂಪೂರ್ಣ ಭಾವದೊರತೆ
ಬರದದ್ದೆಲ್ಲವೂ ಆಗದು ಪರಿಪೂರ್ಣ ಕಾವ್ಯ
ಅದೆಂದು ಬರಹಾತೀತ ಭಾವಾತೀತ ಭಾಷ್ಯ.!

ಸ್ಪಂದನೆಯ ಸ್ವರವೋ ಚಿಂತನೆಯ ಕರವೋ
ಮೆಲ್ಲ ಮೀಟುವುದು ಕವಿಯೆದೆ ಜೀವತಂತಿ
ಹೊಮ್ಮಿದರು ಸಹಸ್ರಾರು ನಾದಗಳು ಒಳಗೆ
ಕೆಲವಷ್ಟೆ ನಿನಾದವಾಗಿ ಕೇಳುವುದು ಹೊರಗೆ.!

ಹಾಳೆಯಲಿ ಧುಮ್ಮಿಕ್ಕಿ ಹರಿದದ್ದು ಅದೆಷ್ಟೋ?
ಎದೆಯೊಳಗೇ ಉಳಿದು ಬಿಕ್ಕಿದ್ದು ಮತ್ತೆಷ್ಟೋ.?
ಭಾವಸಾಗರದಿ ಭೋರ್ಗರೆವ ಸ್ವರದಲೆಗಳೆಲ್ಲ
ಪದವಾಗಿ ಪದ್ಯವಾಗಿ ಎಂದು ಮೊರೆವುದಿಲ್ಲ.!

ಮಸ್ತಕದಿ ಮೂಡಿದ ಚಿಂತನೆ ಕಲ್ಪನೆಗಳೆಂದು
ಪುಸ್ತಕದಿ ಇಡಿಯಾಗಿಳಿದು ಮಿನುಗದೆಂದೆಂದು
ಸಾವಿರದ ಸಾವಿರ ಸಂವೇದನೆಗಳು ಮಿಡಿದು
ಕಡೆಗೆ ಅಕ್ಷರವಾಗದೆ ಬಿಡುವವು ಒಳಗುಳಿದು.!

ಕವಿಯ ಒಡಲೊಳಗೆ ಕಟ್ಟಿದ ಗರ್ಭಗಳೆಲ್ಲವು
ಕವನ ಕವಿತೆ ಕಾವ್ಯವಾಗಿ ಜೀವ ತಳೆಯವು
ಹೆರಿಗೆಗಿಂತ ಗರ್ಭಾಪಾತವಾದದ್ದೇ ಹೆಚ್ಚೆಚ್ಚು
ಅಭಿವ್ಯಕ್ತವಾದದ್ದಕ್ಕಿಂತ ಅವ್ಯಕ್ತವಾದದ್ದೇ ಹೆಚ್ಚು.!

ಪ್ರತಿ ಬಾರಿ ಬರೆದು ಬಯಲಾಗಿಸಿದ್ದಕ್ಕಿಂತಲು
ಕವಿಯೆದೆ ಬಸಿದು ಕೊಟ್ಟ ಭಾವವೇ ಅಧಿಕ
ಹಚ್ಚಿದ ಆ ಅಕ್ಷರ ಪ್ರಣತೆ ಬೆಳಗಿದ್ದಕ್ಕಿಂತಲೂ
ಅವನೆದೆಯೊಳಗೆ ಹೊಮ್ಮಿದ ಬೆಳಕೇ ಅಧಿಕ.!

ಕವಿಗಿದು ಶಾಪವೂ ಹೌದು ವರವೂ ಹೌದು
ಹಾಗಾಗಿ ಖಾಲಿಯಾಗದೆ ಉಳಿದಿದೆ ಹೃದಯ
ಚಿಮ್ಮಿದ ಸ್ಪಂದನೆಗಳೆಲ್ಲ ಹೊರಗುಕ್ಕದೆ ಉಳಿದು
ಕಾವ್ಯಸೃಷ್ಟಿಗೆ ಚೈತನ್ಯ ನೀಡುತ್ತಲೇ ಇದೆ ನಿತ್ಯ.!

ಎ.ಎನ್.ರಮೇಶ್. ಗುಬ್ಬಿ.




ನೃಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಕಾಕತೀಯ ಕಾಲೋನಿಯಲ್ಲಿ ನೂತನ ಧ್ಯಾನವನ ಉದ್ಯಾನವನ ಉದ್ಘಾಟನೆ

## ನಗರದಲ್ಲಿ ಹಸಿರು ವಾತಾವರಣ ನಿರ್ಮಾಣಕ್ಕೆ ಸರ್ಕಾರದ ಆದ್ಯತೆ – ಸಚಿವ ಎನ್.ಎಸ್. ಬೋಸರಾಜು

ನೃಜ್ಯ ದೆಸೆ ನ್ಯೂಸ್

ರಾಯಚೂರು: ನಗರದ ಅಭಿವೃದ್ಧಿ ಹಾಗೂ ಸಾರ್ವಜನಿಕರ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಉದ್ದೇಶದಿಂದ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 5ರ ಕಾಕತೀಯ ಕಾಲೋನಿಯಲ್ಲಿ ನಿರ್ಮಿಸಲಾದ ಧ್ಯಾನವನ ಉದ್ಯಾನವನವನ್ನು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ ಸಭಾ ನಾಯಕರಾದ ಸನ್ಮಾನ್ಯ ಶ್ರೀ ಎನ್.ಎಸ್. ಬೋಸರಾಜು ಜಿ ಅವರು ಉದ್ಘಾಟಿಸಿದರು.2024 25ನೇ ಸಾಲಿನ ವಿಧಾನ ಪರಿಷತ್ ಸದಸ್ಯರ ಅನುದಾನದಿಂದ ಈ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗಿದ್ದು, ಸ್ಥಳೀಯ ನಾಗ-ರಿಕರಿಗೆ ಬೆಳಿಗ್ಗೆ ಹಾಗೂ ಸಂಜೆ ವಾಕಿಂ-ಗ್, ವ್ಯಾಯಾಮ, ಧ್ಯಾನ ಮತ್ತು ವಿಶ್ರಾಂತಿಗೆ ಅನುಕೂಲವಾಗುವಂತೆ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಉದ್ಯಾನವನದಲ್ಲಿ ಹಸಿರು ಸಸ್ಯಸಂಪತ್ತು, ಕುಳಿತುಕೊಳ್ಳುವ ವ್ಯವಸ್ಥೆ, ಮಕ್ಕಳಿಗೆ ಆಟೋಪಕರಣಗಳು ಹಾಗೂ ಪರಿಸರ ಸ್ನೇಹಿ ವಿನ್ಯಾಸವನ್ನು ಅಳವಡಿಸಲಾಗಿದೆ.




ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ನಗರ ಪ್ರದೇಶಗಳಲ್ಲಿ ಹಸಿರು ವಾತಾವರಣ ನಿರ್ಮಾಣವು ಇಂದಿನ ಕಾಲದಲ್ಲಿ ಅತ್ಯಂತ ಅಗತ್ಯವಾಗಿದ್ದು, ಸಾರ್ವಜನಿಕರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಲು ಉದ್ಯಾನವನಗಳ ನಿರ್ಮಾಣ ಮಹತ್ವದ್ದಾಗಿದೆ ಎಂದು ಹೇಳಿದರು. ಜನ-ರಿಗೆ ಉತ್ತಮ ಮೂಲಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಕೆ. ಶಾಂತಪ್ಪ, ಶ್ರೀ ಜಯಣ್ಣ, ರುದ್ರಪ್ಪ ಅಂಗಡಿ, ಶಿವಮೂರ್ತಿ, ಅಮರೇಗೌಡ ಹಂಚಿನಾಳ, ವೆಂಕಟೇಶ್, ಚಂದ್ರಶೇಖರ್ ಮಿರ್ಜಾಪುರ, ಸಿ.ಎಚ್. ಕೇಶವಮೂರ್ತಿ, ಕೆ. ಆದಿನಾರಾಯಣ, ವೈ. ಹರಿಪ್ರಸಾದ್, ಜಯವಂತೆ ಪತಂಗೆ, ಬಸವರಾಜ್ ಪಾಟೀಲ್ ಅತನೂರ್, ಶರಣಪ್ಪ ಬಲ್ಲಟಗಿ, ಡಾ. ಬಸನಗೌಡ ಸೇರಿದಂತೆ ಹಲವು ಗಣ್ಯರು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಸ್ಥಳೀಯ ನಿವಾಸಿಗಳು ನೂತನವಾಗಿ ಅಭಿವೃದ್ಧಿಪಡಿಸಿದ ಧ್ಯಾನವನದಿಂದ ಪ್ರದೇಶದ ಸೌಂದರ್ಯ ಹೆಚ್ಚಿದ್ದು, ಆರೋಗ್ಯಕರ ವಾತಾವರಣ ನಿರ್ಮಾಣಕ್ಕೆ ಇದು ಸಹಕಾ-ರಿಯಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದರು.



# ಗುರುವಂದನೆಯಲ್ಲಿ ಮಸ್ಕಿ ಕಂಗೊಳಿಸಿತು, ಹಳೆ ವಿದ್ಯಾರ್ಥಿನಿಯರ 25 ವರ್ಷಗಳ ನೆನಪಿನ ಬುತ್ತಿ ಸಹಭೋಜನಕ್ಕೆ ಕರೆಯಿತು.

ನೃಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಕಾಕತೀಯ ಶಿಕ್ಷಣ ಸಂಸ್ಥೆಯ ಅವರಣದಲ್ಲಿ ಬಸವ ಕೇಂದ್ರ ವತಿಯಿಂದ ನಡೆದ ಬಸವಜಯಂತಿ ಕಾರ್ಯಕ್ರಮವನ್ನು ಹಾವೇರಿ ಕಾಗಿನೇಲೆ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಮುಕ್ಕಣ್ಣ ಕರಿಗಾರ ಉದ್ಘಾಟಿಸಿ ಮಾತನಾಡಿ 8 ನೂರು ವರ್ಷಗಳ ಕೇಳಗೆ ನಮ್ಮ ರಾಜ್ಯದಲ್ಲಿ ಬಸವಣ್ಣ ಬರಾದೆ ಇದ್ದಲ್ಲಿ ವೀರಶೈವ-ರಿಲ್ಲ,ಲಿಂಗಾಯತರಿಲ್ಲ ಎಲ್ಲಾರು ಶ್ರಾವಣರಾಗಿ ಮತಾಂತರ ಗೋಳಬೇಕಾದ ಪರಿಸ್ಥಿತಿ ಇತ್ತು ದೇವಲಯಗಳು ಶೋಷಣೆಯ ಮೂಲವಾಗಿದು ವೇದ ಸಂಸ್ಕೃತಿ ಬೇದ ಸಂಸ್ಕೃತಿಯಾಗಿದು ಎಲ್ಲಾರನ್ನು ಒಳಗೊಳ್ಳುವ ಸಂಸ್ಕೃತಿ ಬಸವ ಸಂಸ್ಕೃತಿಯಾಗಿದೆ. ಮನುಷ್ಯರೆಲ್ಲರ ಕಲ್ಯಾಣವನ್ನು ಬಯಸುವ ನಿಜಗುರು ಬಸವಣ್ಣನವರು ನಮ್ಮೊಳಗಿರುವ ದೇವರನ್ನು ನೀವೆ ಕಂಡುಕೊಳ್ಳಿ ಎನ್ನುವ ಸಂದೇಶವನ್ನು ನೀಡಿದವರು ಬಸವಣ್ಣನವರು. ಅದ್ದರಿಂದಲೇ ಗ್ರಾಮೀಣ ಭಾಗದ ಜನರು ಬಸವಣ್ಣನವರನ್ನು ದ್ವೀತಿಯ ಶಂಭು ಎಂದು ಕರೆದು ಬಸವಣ್ಣನವರಲ್ಲಿ ಶಿವನನ್ನು ಕಂಡಿದ್ದಾರೆ. ದಯವೇ ಧರ್ಮದ ಮೂಲವಯ್ಯ ಎಂದು ವಿಶ್ವಕ್ಕೆ ಸಾರಿ ,ಧರ್ಮ ಇರುವುದು ಮನುಷ್ಯರಿಗಾಗಿ ಮಾನವಿಯತೆ ಇಲ್ಲದೆ ಇರುವುದು ಧರ್ಮವೇ ಅಲ್ಲ ಎಂದು ನಮ್ಮ ಬಸವಾದಿ ಶರಣರು ವಚನಗಳ ಮೂಲಕ ಸಾರಿದ್ದಾರೆ. ನಾವೇಲ್ಲ ಒಂದು ನಾವೇಲ್ಲರು ಭಾರತೀಯರು ಎನ್ನುವ ಭಾತೃತ್ವದ ಭಾವನೆಯ ಮೂಲಕ ನಾವೇಲ್ಲರು ಒಂದಾಗಿ ಬಾಳಬೇಕೆಂದು ಬೋದಿಸುವುದೆ ಶರಣಧರ್ಮ ,ಬಸವಧರ್ಮವಾಗಿದೆ ಎಂದು ತಿಳಿಸಿದರು. ರಾಯಚೂರಿನ ಉಪನ್ಯಾಸಕರಾದ ರೇಖಾ ಪಾಟೀಲ್ ಬಸವಣ್ಣನವರ ಕುರಿತು ಉಪನ್ಯಾಸ ನೀಡಿದರು. ಅಮರೇಶ ಗವಾಯಿ ಕರೆಗುಡ್ಡ ಇವರಿಂದ ವಚನ ಗಾಯನ ನಡೆಯಿತು. ಕಾರ್ಯಕ್ರಮದಲ್ಲಿ ತಾಲೂಕು ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹ-ರಿಹರ ಪಾಟೀಲ್,ಅಖೀಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಪ್ರತಿನಿಧಿ ಸಿದ್ದಲಿಂಗಪ್ಪ ಚಿಕ್ಕಕೋಟ್ನೆಕಲ್‌ವಕೀಲರು, ತಾ.ಅಧ್ಯಕ್ಷರಾದ ಅರುಣಚಂದಾ, ಕಾಕತೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಜಿ.ಸತ್ಯನಾರಾಯಣ, ಜಾಗತಿಕ ಲಿಂಗಾಯತ ಮಹಾಸಭಾ ತಾ.ಅಧ್ಯಕ್ಷರಾದ ಮಲ್ಲಿಕಾರ್ಜುನಗೌಡ ಚಿಮ್ಮಲಾಪುರ್,ಚುಕ್ಕಿಸೂಗಪ್ಪ ಸಿರವಾರ, ಬಸವಕೇಂದ್ರ ತಾ.ಅಧ್ಯಕ್ಷರಾದ ಶರಣಬಸವ ಪಾಟೀಲ್ ಬೆಟ್ಟದೂರು, ತಾ.ಗೌರವ ಅಧ್ಯಕ್ಷ ಡಾ.ಬಸವಪ್ರಭು ಪಾಟೀಲ್,ಮಹಿಳಾ ಘಟಕದ ಅಧ್ಯಕ್ಷರಾದ ಜಯಲಕ್ಷ್ಮೀ ಟಿ.ಪಾಟೀಲ್,ನಗರ ಘಟಕದ ಅಧ್ಯಕ್ಷರಾದ ರವಿಕುಮಾರ ಸಾಹುಕರ್, ಕುಮಾರಸ್ವಾಮಿ ಮೇದಾ ಸೇರಿದಂತೆ ಇನ್ನಿತರರು ಇದ್ದರು.





# ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಅಂಗವಾಗಿ ಹಸಿರು ಹೊನಲು ಸೇವಾ ಸಂಸ್ಥೆ ( ರಿ)

## ರಕ್ತದಾನ ಮಹಾದಾನವಾಗಿದೆ ಪ್ರತಿಯೊಬ್ಬರು ರಕ್ತದಾನ ಮಾಡಬೇಕು: ರಾಜೇಶ್ ಕರ್ವ

ನೃಜ್ಯ ದೆಸೆ ನ್ಯೂಸ್

ಕೊಟ್ಟೂರು : ರಕ್ತದಾನ ಮಹಾದಾನ ನೀವು ಮಾಡುವ ರಕ್ತದಾನವು ಬಡರೋಗಿಗಳು ಬದುಕುತ್ತವೆ. ಆದ್ದರಿಂದ ಎಲ್ಲಾ ದಾನಕ್ಕಿಂತ ಶ್ರೇಷ್ಠವಾದ ದಾನ ರಕ್ತದಾನವಾಗಿದೆ ಪ್ರತಿಯೊಬ್ಬರೂ ಆರು ತಿಂಗಳ ಅಥವಾ ಒಂದು ವರ್ಷದ ಒಳಗಾಗಿ ರಕ್ತದಾನ ಮಾಡುವುದರಿಂದ ಹೃದಯ ಮತ್ತು ಕಬ್ಬಿನಾಂಶ ಕಡಿಮೆಯಾಗಿ ಹೊಸ ರಕ್ತ ಉತ್ಪಾದನೆ ಸಹಾಯವಾಗುತ್ತೆ ಇದರಿಂದ ಆರೋಗ್ಯವಂತರಾಗಿರುತ್ತೆ ಎಂದು ರಾಜೇಶ್ ಕರ್ವ ಸುಮಾರು 84 ಸರಿ ರಕ್ತದಾನ ಮಾಡಿದ್ದಾರೆ.ಪಟ್ಟಣದ ಬಸ್ ನಿಲ್ದಾಣದ ಹತ್ತಿರ ಶ್ರೀ ನಾಗರಾಜ್ ಶಾಲೆಯಲ್ಲಿ ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಅಂಗವಾಗಿ ಹಸಿರು ಹೊನಲು ಸೇವಾ ಸಂಸ್ಥೆ ( ರಿ ) ಮತ್ತು ಸ್ವಾಮಿ ವಿವೇಕಾನಂದ ಚಾರಿಬಲ್ ರಕ್ತ ಭಂಡಾರ ಇವರ ಸಹಯೋಗದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ನಡೆಸಲಾಯಿತು. ಈ ಕಾರ್ಯಕ್ರಮವನ್ನು ನಿವೃತ್ತ ಪೌರಕಾರ್ಮಿಕರನ್ನು ಸನ್ಮಾನಿಸುವ ಮೂಲಕ ಮೇ 1 ರಂದು ಕಾರ್ಮಿಕ ದಿನಾಚರಣೆಯನ್ನು ವಿಶಿಷ್ಟ ರೀತಿಯಲ್ಲಿ ಆಚ-ರಿಸಲಾಯಿತು.ನಂತರ ಈ ರಕ್ತದಾನ ಶಿಬಿರದಲ್ಲಿ ಯುವಕರು, ಮಹಿಳೆಯರು, ಪುರುಷರು, ಸ್ವಯಂ ಪ್ರೇರಿತವಾಗಿ ಬಂದು ರಕ್ತದಾನ ಮಾಡಿದರು. ನಮ್ಮೂರಿನ ಮೊರಬದ ನಾಗರಾಜ ಅವರು ಮೇ 1ರಂದು ಅವರ ಹುಟ್ಟಿದ ದಿನವಾಗಿದ್ದ ತಮ್ಮ ಪತ್ನಿಯ ಜೊತೆಗೆ ರಕ್ತದಾನ ಶಿಬಿರಕ್ಕೆ ಬಂದು ರಕ್ತದಾನ ಮಾಡುವ ಮೂಲಕ ಹುಟ್ಟುಹಬ್ಬವನ್ನು ಈ ರೀತಿ ಆಚ-ರಿಸಿದರು. ಗೌರವಾಧ್ಯಕ್ಷರು : ಸಿ. ಬಸವರಾಜ್ ಅಧ್ಯಕ್ಷರು: ಎಸ್. ಗುರುರಾಜ್ ಉಪಾಧ್ಯಕ್ಷರು : ಬಿ. ಆರ್. ವಿಕ್ರಂ ಕಾರ್ಯದರ್ಶಿ: ಅಜಯ್ ಖಜಾಂಚಿ : ದೇವರಮನಿ ಸಿದ್ದೇಶ್ ಸಂಘದ ಪದಾಧಿಕಾರಿಗಳು : ಬಂಜಾರ್ ನಾಗರಾಜ್, ರಾಜೇಶ್ ಕರ್ವ , ಪತ್ತಿಕೊಡ ಪ್ರಶಾಂತ, ರೇವಡಿ ನಾಗಭೂಷಣ್, ಎಚ್ ವಿಜಯಕುಮಾರ್, ತೆಗ್ಗಿನಕೇರಿ ಕೊಟ್ರೇಶ್, ಎಂ.ನವೀನ್ ಕುಮಾರ್, ಚೇತನ್ ಜೈನ್, ಸಿದ್ದೇಶ್, ಕೆ. ಎಂ.ರಮೇಶ್, ಶಫಿ, ಶಿಕಾಪುರಿ ನವೀನ್ ಕುಮಾರ್, ಎಂ.ಎಂ ಜಡೇಸ್ವಾಮಿ, ಕವಿಂದ್ರ, ಉದಯಕುಮಾರ್, ದೊಡ್ಡ ಕೊಟ್ರೇಶ್, ಎಂ. ಎಸ್. ಅಭಿಷೇಕ್, ಸ್ವೀಟ್ ಬಸವರಾಜ್, ನಾಗರಾಜ್, ಸಚಿನ್ ಕೂಡ್ಲಿಗಿ, ಸ್ವರೂಪ್, ಪರಶುರಾಮ್, ಸನ್ಮಾನಿಕರಾದ ನಿವೃತ್ತ ಪೌರಕಾರ್ಮಿಕರು ಲಕ್ಷ್ಮಮ್ಮ, ಬಾಳಿ ಪರಸಪ್ಪ, ಅಮ್ಮನ ಕೇರಿ ಮಲ್ಲಿಕಾರ್ಜುನ್ ಪ್ಪ, ಕಟ್ಟಡ ಕಾರ್ಮಿಕರಾದ ಸಿದ್ದಪ್ಪ, ಮರಿಯಪ್ಪ ಇತರರು ಇದ್ದರರು





# ದೇವದುರ್ಗದಲ್ಲಿ ಮುಸ್ಲಿಂ ಧಾರ್ಮಿಕ ಸಂಸ್ಥೆಗಳ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ನೃಜ್ಯ ದೆಸೆ ನ್ಯೂಸ್

ರಾಯಚೂರು : ಜಿಲ್ಲೆಯ ದೇವದುರ್ಗ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಮುಸ್ಲಿಂ ಧಾರ್ಮಿಕ ಸಂಸ್ಥೆಗಳ ಒಕ್ಕೂಟ (ಖ), ಬೆಂಗಳೂರು ವತಿಯಿಂದ ಸದಸ್ಯತ್ವ ಅಭಿಯಾನಕ್ಕೆ ಭಾನುವಾರ ಚಾಲನೆ ನೀಡಲಾಯಿತು. ಮೋಮಿನಪುರದಲ್ಲಿರುವ ಜನಾಬ್ ಮೊಹಮ್ಮದ್ ಆಸಿಫ್ ಜಿಲಾನಿ ಸದರ್ ಖಾಜಿ ಅವರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಸಂಸ್ಥೆಯ ರಾಜ್ಯ ನಿರ್ದೇಶಕರಾದ ಜನಾಬ್ ಮೊಹಮ್ಮದ್ ಆಸಿಫ್ ಜಿಲಾನಿ ಅವರು ಅಭಿಯಾನವನ್ನು ಅಧಿಕೃತವಾಗಿ ಆರಂಭಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಅರಕೇರದ ಖಾ-ಜಿಯಾಗಿರುವ ರಹೀಂ ಖಾಜಿ ಅವರು ಮೊದಲ ಸದಸ್ಯತ್ವವನ್ನು ಪಡೆದುಕೊಂಡರು. ನಂತರ ಬಾಬುಸಾಬ್ ಗೌರಂಪೇಟೆ, ಖಾಸಿಂಸಾಬ್ ನಗರಗುಂಡ, ಮೆಹಬೂಬ ಮದ್ಲಾಪುರ್ ಅರಕೇರ, ಅಲೀವ್ ಜಾನಿ ಅರಕೇರ, ಅಬ್ದುಲ್ ಸಾಬ್ ಗಣೇಕಲ್, ಕಾಸಿಂಸಾಬ್ ಮಕಾಶಿ, ಗುಂಡುಗುರ್ತಿ ಸೇರಿದಂತೆ ಹಲವರು ಸದಸ್ಯತ್ವ ಸ್ವೀಕರಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಖಾಜಿ ಎಂ.ಡಿ. ಆಸಿಫ್ ಜಿಲಾನಿ ಅವರು, ಸಂಸ್ಥೆಯ ಮುಖ್ಯ ಉದ್ದೇಶಗಳು ಸಮಾಜ ಸೇವೆ, ಬಡವರಿಗೆ ನೆರವು, ಬಡ ಹೆಣ್ಣುಮಕ್ಕಳ ಮದುವೆ ಸಹಾಯ, ಸಾಮೂಹಿಕ ವಿವಾಹಗಳ ಆಯೋಜನೆ ಮತ್ತು ಎಲ್ಲಾ ಜಾತಿ-ಧರ್ಮದ ಜನರನ್ನು ಒಗ್ಗೂಡಿಸುವುದಾಗಿದೆ ಎಂದು ವಿವ-ರಿಸಿದರು.ಮುಂದಿನ ದಿನಗಳಲ್ಲಿ ಈ ಸದಸ್ಯತ್ವ ಅಭಿಯಾನವನ್ನು ರಾಜ್ಯಾದ್ಯಂತ ವಿಸ್ತ-ರಿಸಲಾಗುವುದು ಎಂದು ಅವರು ತಿಳಿಸಿದರು.



## ನೇಮಕಾತಿ ಪ್ರಕಟಣೆ

**SPLOCA ನೇಮಕಾತಿ 2026: 1 ಅಕೌಂಟೆಂಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರವು ಏಪ್ರಿಲ್ 2026 ರ SPLOCA ಅಧಿಕೃತ ಅಧಿಸೂಚನೆಯ ಮೂಲಕ ಅಕೌಂಟೆಂಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಮೇ–2026 ರಂದು ಅಥವಾ ಅದಕ್ಕೂ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: sploca.org**

## ಕೊಪ್ಪಳ :– ಸಿದ್ದಾಪುರ: ಬಸ್–ಲಾರಿ ನಡುವೆ ಭೀಕರ ಅಪಘಾತ; 9 ಮಂದಿಗೆ ಗಾಯ ; ಓರ್ವನ

ನೈಜ್ಯ ದೆಸೆ ನ್ಯೂಸ್

ಸಿದ್ದಾಪುರ: ಇಲ್ಲಿನ ರಾಜ್ಯ ಹೆದ್ದಾರಿಯ ಬಳಿ ಲಾರಿ ಮತ್ತು ಖಾಸಗಿ ಬಸ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ 9 ಪ್ರಯಾಣಿಕರು ಗಾಯಗೊಂಡಿರುವ ಗಾಯಗೊಂಡಿರುವ ಘಟನೆ ಸೋಮವಾರ ನಸುಕಿನ ಜಾವ ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕು ಸಿದ್ದಾಪುರ ಹೊರವಲಯದ ಗುಂಡೂರು ಕ್ರಾಸ್ ಬಳಿ ನಡೆದಿದೆ.



ಬೆಂಗಳೂರಿಂದ ದೇವದುರ್ಗಕ್ಕೆ ಹೊರಟಿದ್ದ ಸ್ಲೀಪರ್ ಕೋಚ್ ಬಸ್ ಹಾಗೂ ತೆಲಂಗಾಣದಿಂದ ಹುಬ್ಬಳ್ಳಿಗೆ ಹೊರಟಿದ್ದ ಸ್ಟಿಲ್ ಪೈಪ್ ತುಂಬಿಕೊಂಡಿದ್ದ ಲಾರಿ ಸಿದ್ದಾಪುರ ಮಾರ್ಗವಾಗಿ ಹೊರಟಿದ್ದ ವೇಳೆ ಮುಖಾಮುಖಿ ಡಿಕ್ಕಿ ಹೊಡೆದಿವೆ. ಅಪಘಾತದ ತೀವ್ರತೆಗೆ ಬಸ್ಸಿನ ಮುಂಭಾಗ ಹಾಗೂ ಲಾರಿಯ ಮುಂಬಾಗ ಸಂಪೂರ್ಣ ಜಖಂಗೊಂಡಿದ್ದು, ಬಸ್ಸಿನ ಚಾಲಕ ಸೇರಿದಂತೆ ಬಸ್ಸಿನಲ್ಲಿದ್ದ 9 ಮಂದಿ ಗಾಯಗೊಂಡಿದ್ದಾರೆ. ರಕ್ಷಣಾ ಕಾರ್ಯ: ಅಪಘಾತ ಸಂಭವಿಸುತ್ತಿದ್ದಂತೆ

ಸ್ಥಳೀಯರು ಧಾವಿಸಿ ಬಂದು, ಬಸ್ಸಿನೊಳಗೆ ಸಿಲುಕಿಕೊಂಡಿದ್ದ ಗಾಯಾಳುಗಳನ್ನು ಹೊರತೆಗೆಯಲು ನೆರವಾದರು. ಗಾಯಾಳುಗಳನ್ನು ಕೂಡಲೇ ಗಂಗಾವತಿ, ಸಿಂಧನೂರು, ರಾಯಚೂರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ. ಇವರಲ್ಲಿ ಓರ್ವನ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ.ಸಂಚಾರ ವ್ಯತ್ಯಯ: ರಾಜ್ಯ ಹೆದ್ದಾರಿಯಲ್ಲಿ ಅಪಘಾತ

ನಡೆದ ಕಾರಣ ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ಥವಾಗಿತ್ತು. ವಿಷಯ ತಿಳಿದ ಗಂಗಾವತಿ ಡಿವೈ ಎಸ್ಪಿ ಹಾಗೂ ಕಾರಟಗಿ ಪಿಎಸ್‌ಐ ಸ್ಥಳಕ್ಕೆಭೇಟಿನೀಡಿ ಪರಿಶೀಲನೆ ನಡೆಸಿ, ಕ್ರೇನ್ ಮೂಲಕ ವಾಹನಗಳನ್ನು ಪಕ್ಕಕ್ಕೆ ಸರಿಸಿ ಸಂಚಾರ ಸುಗಮಗೊಳಿಸುವ ಕೆಲಸ ಮಾಡಿದರು.

ಲಾರಿ ಚಾಲಕನ ಅತಿ ವೇಗವೇ ಅಪಘಾತಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.
ಸುದ್ದಿ ಹಾಗೂ ಜಾಹಿರಾತಿಗಾಗಿ ಸಂಪರ್ಕಿಸಿ
9902277588, 9880707587, 9008787586

## ಕರ್ನಾಟಕದ ಮುಖ್ಯಮಂತ್ರಿ ಬದಲಾವಣೆಯಲ್ಲಿ ಬಿಗ್ ಟ್ವಿಸ್ಟ್: ಸ್ಫೋಟಕ ಹೇಳಿಕೆ ನೀಡಿದ ರಾಯರೆಡ್ಡಿ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು,: ಕರ್ನಾಟಕ ಕಾಂಗ್ರೆಸ್‌ನಲ್ಲಿ ಮುಂಬರುವ ನಾಯಕತ್ವ ಬದಲಾವಣೆ ಮತ್ತು ಸಚಿವ ಸಂಪುಟ ಪುನಾರಚನೆ ಕುರಿತು ಹಿರಿಯ ಶಾಸಕ ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ್ ರಾಯರೆಡ್ಡಿ ಮಹತ್ವದ ಹೇಳಿಕೆ ನೀಡಿದ್ದಾರೆ.ಕುರ್ಚಿ ಕದನಕ್ಕೆ ಸಂಬಂಧಿಸಿದಂತೆ ಅವರು "ಸ್ಫೋಟಕ ಟ್ವಿಸ್ಟ್" ನೀಡಿರುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ರಾಯರೆಡ್ಡಿ ಅವರು ನವದೆಹಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಕರ್ನಾಟಕದ ರಾಜಕೀಯ ಪರಿಸ್ಥಿತಿ ಕುರಿತು



ಚರ್ಚಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನ ಬದಲಾವಣೆಯಾದರೆ, ಖರ್ಗೆ ಅವರೇ ಮುಖ್ಯಮಂತ್ರಿಯಾಗಬೇಕು ಎಂದು ರಾಯರೆಡ್ಡಿ ಖರ್ಗೆ ಅವರಿಗೆ ಸೂಚಿಸಿದ್ದಾರೆ. ಅಲ್ಲದೆ, ಖರ್ಗೆ ಅವರಿಗೆ ಆಹ್ವಾನ ನೀಡಲಾಗಿದೆ ಎಂದು ರಾಯರೆಡ್ಡಿ ಬಹಿರಂಗಪಡಿಸಿದ್ದಾರೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಣತಂತ್ರದ ಭಾಗ ಎಂದೂ ಅವರು ಹೇಳಿದ್ದಾರೆ. ಪಕ್ಷದ ಅಭಿವೃದ್ಧಿ ಮತ್ತು ಸರ್ಕಾರದ ಸ್ಥಿರತೆಗೆ ಅನಗತ್ಯ ಮುಖ್ಯಮಂತ್ರಿ ಬದಲಾವಣೆ ಮಾತುಗಳು ಹಿನ್ನಡೆಯಾಗಬಹುದು ಎಂದು ರಾಯರೆಡ್ಡಿ ಆತಂಕ ವ್ಯಕ್ತಪಡಿಸಿದ್ದಾರೆ.

## ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಪ್ರತಿಭಟನೆ: ಹೊಸ ವೇತನ ಒಪ್ಪಂದಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

ಹಟ್ಟಿ: 2026ರ ಹೊಸ ವೇತನ ಒಪ್ಪಂದವನ್ನು ಶೀಘ್ರವಾಗಿ ಜಾರಿಗೆ ತರಬೇಕು ಹಾಗೂ ಮಾತುಕತೆಗೆ ಆದಷ್ಟು ಬೇಗ ಸಮಿತಿ ರಚಿಸಬೇಕು ಎಂದು ಆಗ್ರಹಿಸಿ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ವತಿಯಿಂದ ಶನಿವಾರದಂದು ಕಂಪನಿಯ ಮುಖ್ಯ ಕಾರ್ಯಾಲಯದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಾಯಿತು.ಸಿಐಟಿಯು ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕಾರ್ಮಿಕರು ಹಾಗೂ ಸಿಬ್ಬಂದಿ ಕೈಯಲ್ಲಿ ಕೆಂಪು ಧ್ವಜಗಳನ್ನು ಹಿಡಿದು ಘೋಷಣೆ ಕೂಗಿ ಆಡಳಿತ ಮಂಡಳಿಯ ಗಮನ ಸೆಳೆದರು. ಬಳಿಕ ಹೆಚ್.ಆರ್.ಜಗನ್ ಮೋಹನ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನಾಕಾರರು, ಹೊಸವೇತನ ಒಪ್ಪಂದದ ಚರ್ಚೆಯನ್ನು ವಿಳಂಬ ಮಾಡದೇ ತಕ್ಷಣ ಆರಂಭಿಸಬೇಕು. ಕಾರ್ಮಿಕ–ರಿಗೆ ನ್ಯಾಯಸಮ್ಮತವೇತನ ಹಾಗೂಸೌಲಭ್ಯಗಳನ್ನು ಒದಗಿಸಬೇಕು ಎಂದು ಒತ್ತಾಯಿಸಿದರು.ಇದೇ ವೇಳೆ ಹಟ್ಟಿ ಚಿನ್ನದ ಗಣಿ ಕಾರ್ಮಿಕರಹಲವುಬಾಕಿಬ ೀಡಿಕೆಗಳನ್ನು ಕೂಡ ತಕ್ಷಣ ಈಡೇರಿಸಬೇಕು ಎಂದು ಆಗ್ರಹಿಸಿದರು.ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಶಫಿ, ಸಿಐಟಿಯು ಜಿಲ್ಲಾ ಜಂಟಿ । ಕಾರ್ಯದರ್ಶಿ ರಮೇಶ ವೀರಾಪೂರು,



ಸದಸ್ಯ ಮೈನುದ್ದೀನ್, ಕಾರ್ಮಿಕ ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಅನ್ವರಿ, ಕಾರ್ಯದರ್ಶಿಗಳಾದ ವೆಂಕೋಬ್ ಮಿಯ್ಯಾಪೂರು, ಗೌಸ್ ಮಿಯಾ, ಜಮದಗ್ನಿ, ರಮೇಶಬಾಬು, ಹನೀಫ್, ನಾಗರಾಜ್ ಡಿ., ಸಿದ್ದಪ್ಪ, ಚಂದ್ರಶೇಖರ್ ನೆಲೋಗಿ, ಗುಂಡಪ್ಪ, ಮುನಿರುದ್ದೀನ್, ಹನುಮಂತಗೌಡ, ಸಿಐಟಿಯು ಹಟ್ಟಿ ಘಟಕದ ಅಧ್ಯಕ್ಷ ಫಕ್ರುದ್ದೀನ್, ಪದಾಧಿಕಾರಿಗಳಾದ ರಫಿ, ಶ್ರೀಧರ್, ಮುಖಂಡರಾದ । ಬಾಬು ಭೂಪೂರು. ಸೋಮಣ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಶ್ರೀ ನಿಜಾನಂದ ಸ್ವಾಮಿ ಅವರ 63ನೇ ಜನ್ಮದಿನೋತ್ಸವ ಮಿಟ್ಟ ಮಲ್ಲಾಪುರ ಮಠ ಇಂದು ಗ್ರಾಮಸ್ಥರ ಮನೆಯ ದೇವರಾಗಿ ಅಭಿವೃದ್ಧಿ ಹೊಂದಿದೆ– ಹಂಪಯ್ಯ ನಾಯಕ

ನೈಜ್ಯ ದೆಸೆ ನ್ಯೂಸ್

ರಾಯಚೂರು:– ಚಿಕ್ಕದಾಗಿ ಪ್ರಾರಂಭಗೊಂಡ ಈ ಮಠವು ಇಂದು ಸುತ್ತಮುತ್ತಲಿನ ಗ್ರಾಮಸ್ಥರ ಮನೆಯ ದೇವರಾಗಿ ಅಭಿವೃದ್ಧಿಗೊಂಡಿರುವ ಶ್ರೀಮಠವು ಸಾಕಷ್ಟು ಜನಗಳಿಗೆ ಮದುವೆ ಇನ್ನಿತರ ಸಮಾರಂಭಗಳಿಗೆ ಅನುಕೂಲವಾಗಿರುವುದು ತುಂಬಾ ಸಂತೋಷವೆನಿಸುತ್ತದೆ ಎಂದು ಮಾನ್ವಿ ಶಾಸಕರಾದ ಹಂಪಯ್ಯ ನಾಯಕ ಸಾಹುಕಾರ್ ಹೇಳಿದರು. ಮಿಟ್ಟಿಮಲ್ಕಾಪುರ ಶಾಂತಾಶ್ರಮದಲ್ಲಿ ಪರಮಪೂಜ್ಯ ಸದ್ಗುರು ಶ್ರೀ ನಿಜಾನಂದ ಮಹಾಸ್ವಾಮಿಗಳವರ 63ನೇಜನ್ಮೋತ್ಸವ ಹಾಗೂ ಶ್ರೀ ಆರೂಢ ಜ್ಯೋತಿ ಭಕ್ತ ನಿಲಯ ಮತ್ತು ಶಾಂತಾಶ್ರಮ ಟ್ರಸ್ಟ್ ಆಫೀಸ್ ಉದ್ಘಾಟನೆ ನೆರವೇರಿಸಿ ಮಾತನಾಡಿದರು.ಮುಖ್ಯ ಅತಿಥಿಗಳ ಆಗಮಿಸಿದ ಜಿ.ಪಂ.ಮಾಜಿ ಸದಸ್ಯಮಹಾಂತೇಶ್ ಪಾಟೀಲ್ ಅತ್ತನೂರ ರವರು ಮಾತನಾಡುತ್ತಾ ನಿಜಾನಂದ ಸ್ವಾಮಿಗಳು ನಾನು ಬಾಲ್ಯ ಸ್ನೇಹಿತರು ಇವರು ಚಿಕ್ಕಂದಿನಿಂದಲೂ ಸಹ ಆಧ್ಯಾತ್ಮ ಚಿಂತನೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಹುಬ್ಬಳ್ಳಿ ಸಿದ್ಧಾರೂಢ ಮಠಕ್ಕೆ ತೆರಳಿ ಅಲ್ಲಿಂದ ಗುರುಗಳ ದೀಕ್ಷೆ ಪಡೆದು ಇಂದು ರಾಯಚೂರಿನ ಮಂತ್ರಾಲಯ ರಸ್ತೆಯಲ್ಲಿ ಮಿಟ್ಟಿ ಮಲ್ಕಾಪುರಅಭಿವೃದ್ಧಿ ಹೊಂದಿದೆ– ಹಂಪಯ್ಯ ನಾಯಕ ದೊಡ್ಡ ಮಠವನ್ನು ಸ್ಥಾಪಿಸಿ ಭಕ್ತ–ರಿಗೆ ಸನ್ಮಾರ್ಗದಲ್ಲಿ ನಡೆಸುವ ಕಾರ್ಯ ಮಾಡುತ್ತಿದ್ದಾರೆ ಎಂದು ಹೇಳಿದರು.ನಂತರ ಇನ್ನೋರ್ವ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸೋಮಣ್ಣ ಬೇವಿನ ಮರದ । ಮಾಜಿ ಶಾಸಕರು ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಬೆಂಗಳೂರು



। ಇವರು ವಿಶೇಷ ಆಹ್ವಾನಿತರಾಗಿ ಆಗಮಿಸಿ ಮಾತನಾಡುತ್ತಾ ಇಂದು ಕಾರ್ಯಕ್ರಮವನ್ನು ನೋಡಿದರೆ ಸಾವಿರಾರು ಭಕ್ತರನ್ನು ಹೊಂದಿರುವ ಈ ಮಠವು ಲೋಕ ಕಲ್ಯಾಣಾರ್ಥವಾಗಿ । 1008 ಜನ ದಂಪತಿಗಳಿಂದ ಲಕ್ಷ ಬಿಲ್ವಾರ್ಚನೆ, ರುದ್ರಾಭಿಷೇಕ ಮಹಾಮಂಗಳಾರತಿ ಮಾಡಿಸಿ ಬಂದ ಭಕ್ತರಿಗೆ ಹಾಗೂ ದಂಪತಿಗಳಿಗೆ ಸೀರೆ ಕುಬುಸ, ಲುಂಗಿ ,ರುದ್ರಾಕ್ಷಿ ಜಪಮಾಲೆ ಮತ್ತು ಕಾಶಿಯಿಂದ ತಂದ ಈಶ್ವರ ಲಿಂಗವನ್ನು ಪರಮಪೂಜ್ಯ ನಿಜಾನಂದ ಸ್ವಾಮಿ ಅವರ ಜನ್ಮದಿನದ । ಅಂಗವಾಗಿ ಭಕ್ತರಿಗೆ ಉಡ–ುಗೊರೆಯಾಗಿ ನೀಡಿರುವುದು ಶ್ರೀಮಠದ ಹಿರಿಮೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದರು ..ನಂತರ ಶ್ರೀಮಠಕ್ಕೆ ಒಂದು ಕಲ್ಯಾಣ ಕಾರ್ಯಕ್ಕಾಗಿ ಕಲ್ಯಾಣ ಮಂಟಪ ಅವಶ್ಯಕತೆ ಎಂದು ಭಕ್ತರ । ಬೇಡಿಕೆ ಇದೆ ಅದಕ್ಕಾಗಿ ಹಾಗೂ ನಾವೆಲ್ಲ ಸೇರಿ ಒಂದು ಕಲ್ಯಾಣ ಮಂಟಪವನ್ನು ಕಟ್ಟುವುದಾಗಿ ಭರವಸೆ ನೀಡಿದರು. ನಂತರ ಪರಮಪೂಜ್ಯ ನಿಜಾನಂದ ಸ್ವಾಮಿಗಳು ಭಕ್ತರಿಂದ ಸನ್ಮಾನ ಸ್ವೀಕರಿಸಿ । ಮಾತನಾಡುತ್ತಾ ಹುಟ್ಟುಹಬ್ಬ ಎಂದರೆ ಕೇವಲ ಕತ್ತರಿಸಿ ಶಾಲು ಸನ್ಮಾನವನ್ನು ಸ್ವೀಕರಿಸಿ ಸಂಭ್ರಮಿಸದೆ ಸಸಿ ನೆಡುವುದರ ಮೂಲಕ ಹಸಿದವರಿಗೆ ಅನ್ನ ಸಂತರ್ಪಣೆ ಮಾಡುವುದರ ಮೂಲಕ ಹಾಗೂ ಜನರಿಗೆ ಆಧ್ಯಾತ್ಮ ಚಿಂತನೆ ಹಾಗೂ ಇಷ್ಟ ಲಿಂಗ ಪೂಜೆಯ ವಿಧಿ ವಿಧಾನಗಳನ್ನು ಹೇಳಿಕೊಡುವ । ಕಾರ್ಯವನ್ನು ಸರ್ವರೂ ಮಾಡಬೇಕಾಗಿದೆ ಎಂದರು. ಇಂದು ನಾನು 1008 ಜನ ದಂಪತಿಗಳಿಂದ ಲಕ್ಷ ಬಿಲ್ವಾರ್ಚನೆ, ರುದ್ರಾಭಿಷೇಕದ ಮತ್ತು ಮಹಾಮಂಗಳಾರತಿಯನ್ನು ಅವರ ಕೈಯಿಂದಲೇ । ಮಾಡಿಸಿ ಜನರಿಗೆ ಇಷ್ಟಲಿಂಗ ಪೂಜೆ ವಿಧಿ ವಿಧಾನವನ್ನು ಹೇಳಿಕೊಡುವುದರ ಮೂಲಕ ಹುಟ್ಟು । ಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದೇನೆ ಇದಕ್ಕೆ ನಮ್ಮ ಸಕಲ ಸದ್ಭಕ್ತರ ಸಹಕಾರದಿಂದ ಮಾತ್ರ ಈ ಕಾರ್ಯ ಮಾಡಲು ಸಾಧ್ಯವಾಗಿದೆ ಎಂದರು. ಈ ಮಠವು ಜಾತಿ. ಮತ ಪಂಥ–ಗಳ ಭೇದವಿಲ್ಲದೆ । ಸರ್ವರು ಈ ಮಠಕ್ಕೆ ಆಗಮಿಸುತ್ತಿದ್ದು ಇಂದಿನ ವಿಶೇಷವೇನೆಂದರೆ ಮೂರು ಜನ ಮುಸ್ಲಿಂ ಕುಟುಂಬ ಹಾಗೂ ಕ್ರೈಸ್ತ ಕುಟುಂಬಗಳು ಸಹ ಬಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಇಷ್ಟಲಿಂಗ ಪೂಜೆಯ ವಿಧಿ ವಿಧಾನ ಕಾರ್ಯದಲ್ಲಿ ಪಾಲ್ಗೊಂಡಿರುವುದು ನನ್ನ ಜನ್ಮದಿನದ ಸಾರ್ಥಕತೆ ಎಂದು । ನಾನು ಭಾವಿಸುತ್ತೇನೆ ಎಂದು ಹೇಳಿದರು. ಕಾಶಿಯಿಂದ ರುದ್ರಾಕ್ಷಿ ಜಪಮಾಲೆ ಹಾಗೂ ಈಶ್ವರ ಲಿಂಗವನ್ನು ತರಿಸಿ 1008 ದಂಪತಿಗಳಿಗೆ ಶ್ರೀಮಠದ ಕಡೆಯಿಂದ ಹುಟ್ಟು ಹಬ್ಬದ ಉಡುಗೊರೆ । ಯಾಗಿ ಆಶೀರ್ವದಿಸಿದ್ದೇವೆ ಅವರು ಪ್ರತಿನಿತ್ಯ ಶಿವನ ಪೂಜೆ ಸಲ್ಲಿಸುವುದರ ಮೂಲಕ ಅಧ್ಯಾತ್ಮದ । ಜೀವನ ಸಾಗಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.ಪ್ರಾಸ್ತಾವಿಕವಾಗಿ ಸಿದ್ದಲಿಂಗಪ್ಪ ಗೌಡ ನ್ಯಾಯವಾದಿಗಳು ಮಾನ್ವಿ ಮಾತನಾಡಿ ಹುಬ್ಬಳ್ಳಿಯ ಅದ್ಭತ ಸರ್ವಭೌಮ ಚಕ್ರವರ್ತಿ ಶಿವಾವತಾರಿ । ನಡೆದಾಡುವ ದೇವರು ಮಾತನಾಡುವ ಭಗವಂತ ಪರಮಪೂಜ್ಯ ಶ್ರೀಮದ್ ಜಗದ್ಗುರು ಸಿದ್ಧಾರೂಢ । ಮಹಾಸ್ವಾಮಿಯವರ ಪರಮಪೂಜ್ಯ ಆರೂಢ ಜ್ಯೋತಿ ನಿರಾಬಾರಿ ಸದ್ಗುರು ಶಿವಪುತ್ರ ರೂಢ ಮಹಾಸ್ವಾಮಿಯವರ ವರಪ್ರಸಾದದಿಂದ ಜನಿಸಿದ ಸ್ವಾಮಿಗಳು ಶ್ರೀ ಅವರ ಪಾದ ಸೇವೆ ಸುಮಾರು । ಆರು ವರ್ಷಗಳ ಕಾಲ ಪರಿಯಂತ ಪಾದಾನುಗ್ರಹಕ್ಕೆ ಪಾತ್ರರಾಗಿ ಗುರು ಧ್ಯಾನ, ಗುರು ಚಿಂತನೆ. ಗುರುಸೇವೆ ಅನ್ನದಾಸೋಹ ಸಾಮೂಹಿಕ ವಿವಾಹಗಳನ್ನು ಮಾಡುತ್ತಾ ರಾಯಚೂರಿಗೆ ಆಗಮಿಸಿ । ಜಿಲ್ಲೆಯ ಹತ್ತಾರು ಮಠಗಳನ್ನು ಸ್ಥಾಪಿಸಿ ಪುರಾಣ ಪ್ರವಚನ ಜಾತ್ರೆಗಳನ್ನು ಮಾಡುತ್ತಾ ಕರ್ನಾಟಕ । ಆಂಧ್ರಪ್ರದೇಶ ಮಹಾರಾಷ್ಟ್ರ ರಾಜ್ಯಗಳಲ್ಲಿ ಚಿರ ಪರಿಚಿತರಾಗಿ ಜನ ಸೇವೆ ಜನಾ ರ್ದನ ಸೇವೆ ಎಂಬಂತೆ ತಮ್ಮ ಆಯುಷ್ಯವನ್ನು ಮುಡುಪಾಗಿಟ್ಟಿರುವ ಪೂಜ್ಯಶ್ರೀ ನಿಜಾನಂದ ಸ್ವಾಮಿ ಅವರ । 63ನೇ ಜನ್ಮದಿನೋತ್ಸವವನ್ನು ಇಂದು ಆಚರಿಸುತ್ತಿದ್ದೇವೆ ಎಂದರು.

# ರಾಯಚೂರು, ದೇವದುರ್ಗ : ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

ರಾಯಚೂರು:–ಜಿಲ್ಲೆಯ ರಾಯಚೂರುಹಾಗೂದೇವದುರ್ಗದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026–27ನೇ ಸಾಲಿನಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಪಾಸಾಗಿರುವ ಅರ್ಹ ಅಭ್ಯರ್ಥಿಗಳು ಡಿಪ್ಲೋಮಾ ಇನ್ ಸಿವಿಲ್ ಎಂಜಿನಿಯರಿಂಗ್, ಡಿಪ್ಲೋಮಾ ಇನ್ ಇ.ಇ ಎಂಜಿನಿಯರಿಂಗ್, ಪ್ರವೇಶ ಪಡೆಯಲು ದಿನಾಂಕ: ಡಿಪ್ಲೋಮಾ ಇನ್ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್, ಡಿಪ್ಲೋಮಾ ಇನ್ ಮೆಕಾನಿಕಲ್, ಡಿಪ್ಲೋಮಾ ಇನ್ ವಿದ್ಯುತ್ ಮತ್ತು ಸಂವಹನ ಎಂಜಿನಿಯರಿಂಗ್‌ನಲ್ಲಿ ಪ್ರವೇಶ ಪಡೆಯಬಹುದಾಗಿದೆ.ಅರ್ಹ ಅಭ್ಯರ್ಥಿಗಳು ಕಾಲೇಜುಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: https://dtetech.karnataka.gov.in/kartechnical ಅಥಂ dtek.karnataka.gov.in ನಲ್ಲಿ ದಿನಾಂಕ:16–05–2026ರ ಸಂಜೆ 05.30 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿ ಪ್ರಕಟಣೆಯನ್ನು ಅಧೀಕೃತ ವೆಬ್‌ಸೈಟ್‌ಗಳ ಮೂಲಕ ದಿನಾಂಕ: 16–05–2026 ಸಂಜೆ 06ಗಂಟೆಯ ನಂತರ ಪ್ರಕಟಿಸಲಾಗುವುದು. ಮೆ–ರಿಟ್ ಪಟ್ಟಿ ಆಕ್ಷೇಪಣೆಗೆ/ಪರಿಷ್ಕರಣೆ/ತಿದ್ದುಪಡೆ ಮಾಡಲು ಇಚ್ಛಿಸಿದಲ್ಲಿ ದಿನಾಂಕ: 18–05–2025ರ ಬೆಳಿಗ್ಗೆ 10ರಿಂದ ಸಂಜೆ 04ರವರೆಗೆ ಅವಕಾಶ ನೀಡಲಾಗಿದೆ. ಅಂತಿಮ ಮೆರಿಟ್ ಪಟ್ಟಿಪ್ರಕಟಣೆಯನ್ನು ದಿನಾಂಕ:18–05–2026ರ ಸಂಜೆ 05.30ರ ನಂತರ ಪ್ರಕಟಿಸಲಾಗುವುದು. ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳುನಿಗದಿತ ಶುಲ್ಕದೊಂದಿಗೆ ದಿನಾಂಕ:23–05–2026ರಿಂದ 25–05–2026 ರವರೆಗೆ ಅವಕಾಶ ನೀಡಲಾಗಿದೆ. ಭರ್ತಿ ಆಗದೇ ಉಳಿಕೆ ಸೀಟುಗಳನ್ನು ಮೊದಲು ಬಂದವರಿಗೆ ಮೊದಲು ಆದ್ಯತೆ ಮೇರೆಗೆ ಪ್ರಾಚಾರ್ಯರ ಹಂತದಲ್ಲಿ ಆಫ್‌ಲೈನ್ ಮೂಲಕ ದಿನಾಂಕ:26–05–2026 ರಿಂದ 30–05–2026ರವರೆಗೆ ಅವಕಾಶ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್ ಸೈಟ್ ನಲ್ಲಿ ಪ್ರಕಟಿಸಿರುವ ಈ ಮಾಹಿತಿಪುಸ್ತಕದಲ್ಲಿನ ಅಂಶಗಳನ್ನು ಓದಿಕೊಳ್ಳವುದು. ಅಥವಾ ಸರ್ಕಾರಿ ಪಾಲಿಟೆಕ್ನಿಕ್ ರಾಯಚೂರು ಅಥವಾ ದೇವದುರ್ಗದ ಸರ್ಕಾರಿಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### (B.E) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್

(B.E) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್ (B.Arch) ಒಂದು 5 ವರ್ಷಗಳ (10 ಸೆಮಿಸ್ಟರ್‌ಗಳು) ವೃತ್ತಿಪರ ಪದವಿ ಕೋರ್ಸ್ ಆಗಿದ್ದು, ಕಟ್ಟಡಗಳ ವಿನ್ಯಾಸ, ಯೋಜನೆ ಮತ್ತು ನಿರ್ಮಾಣದ ಬಗ್ಗೆ ಕಲಿಸುತ್ತದೆ. 12ನೇ ತರಗತಿಯಲ್ಲಿ (PCM – ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ) 50% ಕ್ಕಿಂತ ಹೆಚ್ಚು ಅಂಕ ಪಡೆದವರು, NATA ಅಥವಾ JEE Main ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದು.B.Arch ಕೋರ್ಸ್‌ನ ಪ್ರಮುಖ ವಿವರಗಳು:ಅವಧಿ: 5 ವರ್ಷಗಳು (10 ಸೆಮಿಸ್ಟರ್‌ಗಳು). ಅರ್ಹತೆ:10+2 (PUC) ಗಣಿತದೊಂದಿಗೆ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು (ಕನಿಷ್ಠ 50% ಅಂಕಗಳು). ಅಥವಾ 10+3 ಡಿಪ್ಲೊಮಾ (ಯಾವುದೇ ಸ್ಟ್ರೀಮ್) ಗಣಿತದೊಂದಿಗೆ.ಪ್ರವೇಶ ಪರೀಕ್ಷೆಗಳು:NATA (National Aptitude Test in Architecture).JEE Main (Paper 2).KCET (ಕರ್ನಾಟಕದ ವಿದ್ಯಾರ್ಥಿಗಳಿಗೆ). ಕೋರ್ಸ್ ಶುಲ್ಕ: ಅಂದಾಜು ₹1 ಲಕ್ಷದಿಂದ ₹20 ಲಕ್ಷದವರೆಗೆ (ಕಾಲೇಜಿನ ಆಧಾರದ ಮೇಲೆ).ಕಲಿಯುವ ವಿಷಯಗಳು: ಆರ್ಕಿಟೆಕ್ಚರಲ್ ವಿನ್ಯಾಸ, ಕಟ್ಟಡ ತಂತ್ರಜ್ಞಾನ, ಇತಿಹಾಸ, ಸಮರ್ಥನೀಯ ವಿನ್ಯಾಸ (Sustainable Design), ಮತ್ತು ಒಳಾಂಗಣ ವಿನ್ಯಾಸ.ಉದ್ಯೋಗಾವಕಾಶಗಳು:ಆರ್ಕಿಟೆಕ್ಟ್ (Architect)ಅರ್ಬನ್ ಪ್ಲಾನರ್ (Urban Planner)ಲ್ಯಾಂಡ್‌ಸ್ಕೇಪ್ ಆರ್ಕಿಟೆಕ್ಟ್ (Landscape Architect)ಪ್ರಾಜೆಕ್ಟ್ ಮ್ಯಾನೇಜರ್ಪ್ರಮುಖ ಕಾಲೇಜುಗಳು:IIT ಗಳು (ಖರಗ್‌ಪುರ, ರೂರ್ಕಿ).KLE ತಾಂತ್ರಿಕ ವಿಶ್ವವಿದ್ಯಾಲಯ, ಹುಬ್ಬಳ್ಳಿ.ಕಇಖ ವಿಶ್ವವಿದ್ಯಾಲಯ, ಬೆಂಗಳೂರು.ಅಮೃತ ವಿಶ್ವ ವಿದ್ಯಾಪೀಠಂ.ಕೌಶಲ್ಯಗಳು:ಈ ಕೋರ್ಸ್‌ಗೆ ಸೃಜನಶೀಲತೆ (Creativity), ರೇಖಾಚಿತ್ರ ಕೌಶಲ್ಯ (Drawing Skills), ಮತ್ತು ವಿಶ್ಲೇಷಣಾತ್ಮಕ ಚಿಂತನೆ (Analytical Thinking) ಅಗತ್ಯ.

## ವಾರ್ಷಿಕ ಸ್ನೇಹ ಸಮ್ಮೇಳನ, ಸನ್ಮಾನ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಜೆವರ್ಗಿ: ಪಟ್ಟಣದ ಮಹಾಲಕ್ಷ್ಮೀ ಕಲಾ ಮತ್ತು ವಾಣಿಜ್ಯ ಪದವಿ ಕಾಲೇಜಿನ ಆವರಣದಲ್ಲಿ ಮೇ 5ರಂದು ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಧಕರ ಸನ್ಮಾನ ಸಮಾರಂಭ ಆಯೋಜಿಸಲಾಗಿದೆ.ಬೆಳಗಾವಿ ಮುಕ್ತಿಮಠದ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರು, ಶಖಾಪುರ ತಪೋವನಮಠದ ಸಿದ್ದರಾಮ ಶಿವಾಚಾರ್ಯ, ಬ್ರಹ್ಮ ವಿದ್ಯಾಶ್ರಮದ ಸತ್ಯಾನಂದ ಮುತ್ಯಾ, ಶಹಾಪುರ ಸಿದ್ದಲಿಂಗೇಶ್ವರ ಬೆಟ್ಟದ ಗಂಗಾಧರೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.ಡಿಸಿಸಿ ಬ್ಯಾಂಕ್ ನಿರ್ದೇಶಕ ಬಸವರಾಜ ಪಾಟೀಲ ನರಿಬೋಳ ಸಮಾರಂಭ ಉದ್ಘಾಟಿಸುವರು. ಮುಖಂಡರಾದ ರಮೇಶ ಬಾಬು ವಕೀಲ, ಶಿವರಾಜ ಪಾಟೀಲ ರದ್ದೇವಾಡಗಿ, ರಾಜಶೇಖರ ಸೀರಿ, ತಹಶೀಲ್ದಾರ್ ಮಲ್ಲಣ್ಣ ಯಲಗೋಡ, ಶಿವಶರಣ ಹಳಿಮನಿ, ಈಶ್ವರ ಹಿಪ್ಪರಗಿ ಭಾಗವಹಿಸಲಿದ್ದಾರೆ.



## ಕೊಪ್ಪಳ : ಅಂಕ ಮರು-ಪರಿಶೀಲನೆ, ಕುಷ್ಟಗಿಯ ವಿದ್ಯಾರ್ಥಿನಿ ರಾಜ್ಯಕ್ಕೆ 2ನೇ ರ್‍ಯಾಂಕ್ ವೈಷ್ಣವಿಗೆ 595ರ ಬದಲು 598 ಅಂಕ, ರಾಜ್ಯಕ್ಕೆ 2ನೇ ರ್‍ಯಾಂಕ್

ನೈಜ್ಯ ದೆಸೆ ನ್ಯೂಸ್

ದೋಟಿಹಾಳ: ಕೇಸೂರು ಗ್ರಾಮದ ವೈಷ್ಣವಿ ಹನಮಂತರಾವ್ ದೇಸಾಯಿ ಎಂಬವರು ಇತ್ತೀಚಿಗೆ ಪ್ರಕಟಗೊಂಡ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ವಿಜ್ಞಾನ ವಿಭಾಗದಲ್ಲಿ 595 ಅಂಕ ಪಡೆದು ರಾಜ್ಯಕ್ಕೆ 5ನೇ ಬ್ಯಾಂಕ್ ಪಡೆದುಕೊಂಡಿದ್ದರು. ಕನ್ನಡ ಭಾಷೆಯಲ್ಲಿ 97 ಅಂಕ ಬಂದ ಕಾರಣ ಇನ್ನೂ ಹೆಚ್ಚಿನ ಅಂಕ ಬರುವ ಭರವಸೆಯಿಂದ ಅಂಕಗಳನ್ನು ಮರು-ಪರಿಶೀಲನೆಗೆ ಹಾಕಲಾಗಿದ್ದರು. ಈ ವೇಳೆ ಈಕೆಗೆ ಕನ್ನಡ ಭಾಷೆಯಲ್ಲಿ ಇನ್ನೂ 3 ಅಂಕ ಹೆಚ್ಚು ಬಂದಿದ್ದು, ಒಟ್ಟು 598 ಅಂಕ ಗಳಿಸಿ ಶೇ.99.66% ಪ್ರತಿಶತ ಪಡೆದು ರಾಜ್ಯಕ್ಕೆ 2ನೇ ಬ್ಯಾಂಕ್ ಪಡೆದ್ದಿದಾಳೆ.ವೈಷ್ಣವಿ ಗಂಗಾವತಿಯ ಶ್ರೀರಾಮ ನಗರದ ಶ್ರೀ ವಿದ್ಯಾನಿಕೇತನ ಪಿಯು ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದು, ದೋಟಿಹಾಳ-ಕೇಸೂರ ಗ್ರಾಮಸ್ಥರು, ಶಿಕ್ಷಣ ಸಂಸ್ಥೆಯವರು ಹಾಗೂ ಪಾಲಕ ಪೋಷಕರು ಹರ್ಷ ವ್ಯಕ್ತಪಡಿಸಿದ್ದಾರೆ.








## ಸಂಸ್ಕಾರಯುತ ಬದುಕಿಗೆ ವೈದಿಕ ಶಿಬಿರ ಮುನ್ನುಡಿ : ತುಂಬಗಿಶ್ರೀ ಸಿದ್ದಿಪುರುಷ ಶ್ರೀ ರಾಮರಂಡೇಶ್ವರ ಕಡೆದ್ದುಗೆ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ : ವೈದಿಕ ಸಂಸ್ಕಾರ ಶಿಬಿರಗಳು ಸಾಮಾನ್ಯವಾಗಿ ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿ ಮತ್ತು ಧಾರ್ಮಿಕ ಮೌಲ್ಯಗಳನ್ನು ಬೆಳೆಸುವ ಬೇಸಿಗೆ ಶಿಬಿರಗಳಾಗಿವೆ ಈ ಶಿಬಿರದಿಂದಮೌಲ್ಯಯುತವಾದ ಬಧುಕು ರೂಪಿಸಿಕೊಳ್ಳಲು ಸಾದ್ಯವಾಗಲಿದೆ ಎಂದು ತುಂಬಗಿ ಸಾಸನೂರ ಹಿರೇಮಠದ ಶ್ರೀ ಮಹಾಂತಲಿಂಗಶಿವಾಚಾರ್ಯಮಹಾಸ್ವಾಮಿಗಳು ನುಡಿದರು.ತಾಲೂಕಿನ ಚಬನೂರ ಗ್ರಾಮದ ಪ್ರತಿಷ್ಠಿತ ದಾಸೋಹ ಮಠವಾಗಿರುವ ಸಿದ್ದಿ ಪುರುಷ ಶ್ರೀ ರಾಮಲಿಂಗೇಶ್ವರ ಮಠದಲ್ಲಿ ಶ್ರೀ ಮಠದ ಧರ್ಮಾಧಿಕಾರಿ ಜ್ಯೋತಿಷ್ಯರತ್ನಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ಮೇ.1ರಿಂದ 30 ರವರೆಗೆ ಒಂದು ತಿಂಗಳ ಪರ್ಯಂತ ಸಿದ್ದಿ ಪುರುಷ ಶ್ರೀ ರಾಮಲಿಂಗೇಶ್ವರ ವೈದಿಕ ಸಂಸ್ಕಾರ ಶಿಬಿರದ ಪ್ರಾರಂಭೋತ್ಸವ ಸಮಾರಂಭವನ್ನು ಉದ್ಘಾಟಿಸಿ ದಿವ್ಯ ಸಾನಿದ್ಯವಹಿಸಿ ಮಾತನಾಡುತ್ತಿದ್ದ ಅವರು ವಿಜಯಪುರ ಜಿಲ್ಲೆಯಲ್ಲಿ ಪ್ರಥಮಭಾರಿಗೆ ಚಬನೂರ ಗ್ರಾಮದ ಸಿದ್ದಿಪುರುಷಶ್ರೀರಾಮಲಿಂಗೇಶ್ವರ ಮಠದಲ್ಲಿ ನಡೆಯುತ್ತಿರುವ ವೈದಿಕ ಸಂಸ್ಕಾರ ಶಿಬಿರವು ಅತ್ಯಂತ ಯಶಸ್ವಿಯಾಗಿ ನಡೆಯಲಿದೆ ಈ ಶಿಬಿರದಲ್ಲಿ ಮಕ್ಕಳಿಗೆ ಇಷ್ಟಲಿಂಗ ಪೂಜೆ, ಶಿವಯೋಗಸಾಧನೆ ಮತ್ತು ಪೂಜಾ




ವಿಧಿವಿಧಾನಗಳನ್ನು ಕಲಿಸಲಾಗುತ್ತದೆ ವೈದಿಕ ಸಂಸ್ಕಾರ, ಧಾರ್ಮಿಕ ಆಚರಣೆಗಳು ಮತ್ತು ಇಷ್ಟಲಿಂಗಪೂಜೆಯ ಬಗ್ಗೆ ಜ್ಞಾನ ನೀಡುವುದು, ವೇದ, ಪಠಣ, ಯೋಗ, ಒಳಗೊಂಡು ಮಕ್ಕಳ ವ್ಯಕ್ತಿತ್ವವಿಕಸನಕ್ಕೆ ಮತ್ತು ಧಾರ್ಮಿಕ ಹಿನ್ನೆಲೆಯನ್ನು ಬಲಪಡಿಸಲು ಅವಶ್ಯವಾಗಿರುವ ಅಂಶಗಳು ಈ ಶಿಬಿರದಲ್ಲಿ ಕಲಿಸಲಾಗುತ್ತಿದೆ ಶ್ರೀ ಮಠದಧರ್ಮಾಧಿಕಾರಿ ಜ್ಯೋತಿಷ್ಯ ರತ್ನ ಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳು ಮಕ್ಕಳಲ್ಲಿ ಸಂಸ್ಕಾರದಜ್ಞಾನಅರಿವುಮುಡಿಸುವ ಸಲುವಾಗಿ ವೈದಿಕ ಸಂಸ್ಕಾರ ಶಿಬಿರವನ್ನು ಆಯೋಜಿಸಿರುವದು ಶ್ಲಾಘನೀಯವಾಗಿದೆ ಇಂತಹ ಕಾರ್ಯಗಳಿಗೆ ಎಲ್ಲಮಠಮಾನ್ಯಗಳು ಮುಂದಾದರೆ ಸಮಾಜವನ್ನು ಸರಿದಾರಿಗೆ ಕೊಂಡೊಯಲು ಸಹಕಾರಿಯಾಗಲಿದೆ ಎಂದರು.ಈ ಶಿಬರದ ನೇತೃತ್ವವಹಿಸಿದ ಶ್ರೀ ಮಠದ ಧರ್ಮಾಧಿಕಾರಿ ಜ್ಯೋತಿಷ್ಯರತ್ನಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳು ಮಾತನಾಡಿ ಇಂದಿನ ದಿನಗಳಲ್ಲಿ ಮಕ್ಕಳಲ್ಲಿ ಸಂಸ್ಕಾರವೆಂಬುದು ಮರೆತು ಹೋಗುತ್ತಿದೆ ಕೆಲವು ಪಾಲಕರು ಕೇವಲಶಿಕ್ಷಣಕೊಡಿಸುವ ಬರದಲ್ಲಿ ಮಕ್ಕಳಲ್ಲಿ ನಡೆ ನುಡಿ ಸಂಸ್ಕಾರವೆಂಬುದನ್ನು ಕಲಿಸುವದನ್ನು ಮರೆತು ಹೋಗಿದ್ದಾರೆ ಹೀಗಾಗಿ ಈ ಭಾಗದ ಮಕ್ಕಳಲ್ಲಿ 1 ತಿಂಗಳ ಶಾಲಾ ರಜೆಯ ಸಂದರ್ಬದಲ್ಲಿ ಮಕ್ಕಳಿಗೆ ಉಪಯುಕ್ತವಾಗುವ ಜಿಲ್ಲೆಯಲ್ಲಿಯೇಮಾದರಿಯಾಗುವ ವೈದಿಕ ಸಂಸ್ಕಾರ ಶಿಬಿರವನ್ನು ಆಯೋಜಿಸಿ ಕಾಶಿಯ ವೇದ ಪಂಡಿತರಿಂದ ಹಾಗೂ ಶ್ರೀಶೈಲ ವೇದ ಮತ್ತುಜ್ಯೋತಿಷ್ಯ ಪಂಡಿತ-ರಿಂದ ವಾರಕ್ಕೊಮ್ಮೆ ವಿಶೇಷ ಭೋದನಾ ಶಿಬಿರ ನಡೆಯಲಿದೆ ಮಕ್ಕಳು ಕೇವಲ ಅಕ್ಷರ ಕಲಿತರೆ ಸಾಲದುಬಧುಕಿನ ದಾರಿ ತಿಳಿಸುವ ತಂದೆತಾಯಿಯನ್ನು ಗೌರವದಿಂದ ಪೂಜ್ಯಭಾವನೆಯಿಂದ ಕಾಣುವ ಸಂಸ್ಕಾರವೆಂಬುದುಭವುಮುಖ್ಯವಾಗಿ ಕಲಿಸಬೇಕಾಗುತ್ತದೆ ಈಕಾರಣದಿಂದಲೇ ಮಕ್ಕಳಿಗಾಗಿಯೇ ವೈದಿಕ ಸಂಸ್ಕಾರ ಶಿಬಿರವನ್ನು ಶ್ರೀಮಠದವತಿಯಿಂದ ಆಯೋಜಿಸಿದ್ದೇವೆ. ಜ್ಯೋತಿಷ್ಯ ರತ್ನ ಶ್ರೀ ರಾಮಲಿಂಗಯ್ಯ ಮಹಾಸ್ವಾಮಿಗಳು ದಿನನಿತ್ಯ ಕುಂಟೋಜಿಯ ವೈದಿಕ ಶಾಸ್ತ್ರೀಗಳಾದವೇ.ವಿರೇಶ ಹಿರೇಮಠ, ವೈದಿಕ ಶಾಸ್ತ್ರೀಗಳಾದ ವೇ.ಪ್ರದೀಪ ಹಿರೇಮಠ,ವೇ.ಗಿರಿಶ ಹಿರೇಮಠ ಅವರು ನಡೆಸಿಕೊಡಲಿದ್ದಾರೆ. ಒಂದು ತಿಂಗಳ ಪರ್ಯಂತ ನಡೆಯಲಿರುವ ವೈದಿಕ ಸಂಸ್ಕಾರ ಶಿಬಿರದಲ್ಲಿ ಪಾಲ್ಗೊಳ್ಳುವವರಿಗೆ ನಿತ್ಯ ದಾಸೋಹದ ಪ್ರಸಾದದ ಜೊತೆಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ ಈ ಶಿಬಿರದಲ್ಲಿ ಪಾಲ್ಗೊಳ್ಳುವ ಮಕ್ಕಳುಮೌಲ್ಯಯುತವಾದಬಧುಕಿನ ದಾರಿಯಲ್ಲಿ ಸಾಗಲಿದ್ದಾರೆಂದರು.ಈ ಸಮಯದಲ್ಲಿ ಶಿಬಿರಾರ್ಥಿಗಳ ಪಾಲಕರು ಉಪಸ್ಥಿತರಿದ್ದರು.

## ಮಹಿಳಾ ಮೀಸಲಾತಿ ಶೀಘ್ರ ಜಾರಿಗೊಳಿಸಿ – ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

ಕಲಬುರಗಿ: 'ನಾರಿ ಶಕ್ತಿ ವಂದನಾ ಬಿಲ್' ಮಹಿಳಾ ಮೀಸಲಾತಿ ಮಸೂದೆಯನ್ನು ಶೀಘ್ರ ಜಾರಿಗೊಳಿಸಿ, ಈಗಲೇ ಅನುಷ್ಠಾನಗೊಳಿಸಿ, ಜೊತೆಗೆ ಮೀಸಲಾತಿಯಲ್ಲಿ ಒಬಿಸಿ ಮಹಿಳೆಯರನ್ನು ಸೇರಿಸಿ' ಎಂದು ಆಗ್ರಹಿಸಿ ಜಿಲ್ಲಾ ಮಹಿಳಾ ಕಾಂಗ್ರೆಸ್‌ನಿಂದ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಚಳವಳಿ ನಡೆಯಿತು.ನಗರದ ರೈಲು ನಿಲ್ದಾಣ ಸಮೀಪದ ಅಂಚೆ ಕಚೇರಿ ಎದುರು ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತೆಯರು ಪ್ರಧಾನಿ ಅವರ ಹೆಸರಿಗೆ ಬರೆದ ಪತ್ರಗಳನ್ನು ಅಂಚೆಪೆಟ್ಟಿಗೆಯಲ್ಲಿ ಹಾಕಿದರು. ಮಹಿಳಾ ಮೀಸಲಾತಿ ಮಸೂದೆಯನ್ನು ಇಂದೇ ಜಾರಿಗೊಳಿಸಿ ಎಂದು ಆಗ್ರಹಿಸಿ ಘೋಷಣೆ ಕೂಗಿದರು. ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ರೇಣುಕಾ



ಸಿಂಗೆ ಮಾತನಾಡಿ, 'ಮೋದಿ ಅವರು ಮಹಿಳೆಯರಿಗೆ ರಾಜಕೀಯದಲ್ಲಿ ಶೇ 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಜಾರಿ ಮಾಡುವುದಾಗಿ ವಂಚಿಸುತ್ತಿದ್ದಾರೆ. ಪದೇಪದೆ ಮಹಿಳೆಯರಿಗೆ ಅವಮಾನ ಮಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. 'ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಕಾಯ್ದೆಯು 2023ರಲ್ಲೇ ಸಂಸತ್ತಿನ ಉಭಯ ಸದನಗಳಲ್ಲಿ ಬಹುಮತದಿಂದ ಪಾಸಾಗಿದೆ. ಈಗ ಮತ್ತೆ ಅದನ್ನೇ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡನೆಯನ್ನೂ ಸೇರಿಸಿ ತಿದ್ದುಪಡಿ ಮಸೂದೆ ಜಾರಿಗೆ ಯತ್ನಿಸುತ್ತಿದ್ದಾರೆ. 2023ರಲ್ಲಿ ಅಂಗೀಕಾರವಾದ ಮಸೂದೆಯನ್ನೇ ತಕ್ಷಣ ಜಾರಿಗೆ ತರುವ ಮೂಲಕ ದೇಶದ, ನಾಡಿನ ಮಹಿಳೆಯರಿಗೆ ನ್ಯಾಯ ಒದಗಿಸಬೇಕು' ಎಂದು ಆಗ್ರಹಿಸಿದರು. 'ಕಾಂಗ್ರೆಸ್ ಪಕ್ಷ ಯಾವತ್ತೂ ಮಹಿಳಾ ಮೀಸಲಾತಿ ವಿರೋಧಿ ಅಲ್ಲ. ಮಸೂದೆ ಜೊತೆಗೆ ಕ್ಷೇತ್ರಗಳ ಪುನರ್ ವಿಂಗಡನೆಯನ್ನೂ ಸೇರಿಸಿದ್ದರಿಂದ ಅದಕ್ಕೆ ಸೋಲಾಗಿದೆ. ಕೇಂದ್ರ ಸರ್ಕಾರಕ್ಕೆ ಮಹಿಳೆಯರ ಮೇಲೆ ನಿಜವಾದ ಕಾಳಜಿ ಇದ್ದರೆ, ಇಂದೇ, ಈಗಲೇ ಪ್ರತ್ಯೇಕವಾಗಿ ಜಾರಿಗೊಳಿಸಲಿ' ಎಂದರು. ಪಕ್ಷದ ಪ್ರಮುಖರಾದ ಸಂಗೀತಾ ಪಾಟೀಲ, ನಂದಾರೆಡ್ಡಿ, ಅನುರಾಧಾ, ಗೀತಾ ಮುದಗಲ್, ಜಯಶ್ರೀ ಚಿಂತಪಳ್ಳಿ, ಲಕ್ಷ್ಮಿ ಸರಸಂಬಕರ್, ಶಹನಾಜ್ ಅಖ್ತರ್, ಸಹೇರಾ ಬಾನು ಪಾಲ್ಗೊಂಡಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101